Online Newspaper Clipping Service
**Dated, Saturday 25th, March – 2017**

DECCAN HERALD
Pg.No.08

# NEET now in four more districts...

**Neet, Page 1**

Minister of Human Resources Prakash Javadekar prompted the increase of 23 new examination cities, the CBSE said.

Last year, 8,02,594 candidates had registered for the test. This year, the number is 11,35,104. This is the highest number for NEET so far.

To accommodate 11.35 lakh candidates in 103 cities, 2,200 institutions will be made examination centres, CBSE said.

## Online change

Students have time till March 27 to change their exam centre on this website: http://cbseneet.nic.in

Javadekar said the increase in the number of candidates is an indication that the nationwide test has been appreciated by aspiring doctors. "The examination got a better response. Therefore, we have increased the number of city centres," he told reporters. The 23 new examination cities include Guntur and Tirupati in Andhra Pradesh; Anand, Bhavnagar and Gandhi Nagar in Gujarat; Kannur and Thrissur in Kerala; Ahmednagar, Amravati, Kolhapur and Satara in Maharashtra; Amritsar in Punjab; Jodhpur in Rajasthan; Namakkal and Tirunelveli in Tamil Nadu; Gorakhpur in Uttar Pradesh; and Howrah in West Bengal.

DECCAN HERALD








Director of Sri Jayadeva Institute of Cardiovascular Sciences and Research, Bengaluru, Dr C N Majunath delivers convocation address at the convocation of Devaraj Urs Academy of Higher Education and Research in Kolar on Friday. (Right) Rank student Dr Navanya receives gold medals. DH PHOTOS

# Doctors should provide quality service to patients: Manjunath

**KOLAR: Dr C N Manjunath, director of Sri Jayadeva Academy of Cardiovascular Sciences and Research, Bengaluru, on Friday said doctors should provide quality service to patients.**

Delivering the convocation address at the seventh convocation of Devaraj Urs Academy of Higher Education and Research here, he said the number of health centres is increasing in both urban and rural areas. But the doctors are cheating patients without providing them quality service, he regretted. Dr Manjunath said more and more doctors want to earn money than treating the patients well.

He said heart-related problems are increasing of late due to stress and work pressure. Cardiac problems are found in people aged 50 to 60 years in US and Japan. But youths, aged between 25 and 30 years, have become heart patients in India, he said.

Dr Manjunath said about 25% of people who come to Jayadeva hospital are aged below 40 years. Youngsters, who are under 18 years, have also become heart patients. With this rate, India would be in the top position in the list of heart patients by 2020, he expressed concern.

He said women are also working like men today. They care about their husbands and children. But they do not go to doctors and ignore their health. All men, who are aged 35 years, and women, who have crossed 45 years, should undergo health check-up every year without fail, he advised.

Gold medals were presented to Dr R Yashaswini, first rank holder in PG medical and diploma course, Dr R Nikhila, Dr K Dileep Kumar, Dr T C Supriya, Dr S Chaitra and Dr Navanya. As many as 271 students received degrees. Devaraj Urs Educational Institutions chairman R L Jalappa, secretary G H Nagaraj, chancellor Dr S Kumar, VC Dr C V Raghuveer, registrar Dr A V M Kutti, principal Dr Harendrakumar and examination controller Dr D V L N Prasad were present.

**DH News Service**

**DR C N MANJUNATH, DIRECTOR OF SRI JAYADEVA INSTITUTE OF CARDIOVASCULAR SCIENCES AND RESEARCH: Stress was less on man 60 years ago. But everyone is facing one or the other kind of stress today. Smile has disappeared from man's face.**

DECCAN HERALD



# Quota for K'taka students: govt in talks with deemed varsities

**BENGALURU:** The state government is in talks with deemed universities to provide 25% seats in medical and dental courses for students from Karnataka at concessional fees.

Participating in a discussion on a Bill in the Legislative Assembly, Medical Education Minister Sharanprakash Patil said unaided colleges have agreed to provide 33% seats in PG medical and dental courses to the government while minority colleges have consented to part with 20% seats.

However, deemed universities were yet to give an assurance on sharing seats with the government. "We are in talks with them. Deemed universities do not come under the jurisdiction of the state government as they are governed by a law passed by Parliament. However, the government's go ahead is required for them to get deemed university status, which we will utilise and make them share seats," the minister said.

The Council passed the Karnataka Professional Educational Institutional (Regulation of Admission and Determination of Fee) (Amendment) Bill, 2017, which will pave way for centralised counselling for PG medical and dental courses. The bill has already been passed by the Assembly.

The Karnataka Examinations Authority will conduct centralised counselling for post-graduate medical and dental courses for 2017-18 across all types of institutions including government, private, minority and deemed university colleges.

The Council also passed the Karnataka Medical Registration (Amendment) Bill, 2017, that makes it mandatory for all medical practitioners to under go a minimum of 120 hours of Continued Medical Education Programme over a period of five years in any recognised medical conference, workshop or seminar for renewal of their registration.

**DH News Service**

# Medical seats: Govt in talks with deemed universities

**EXPRESS NEWS SERVICE**
@ Bengaluru

> **We are not the decision making authorities and we need to discuss the matter with our management**
> A medical university representative

THE Department of Medical Education is trying to make deemed medical universities to share 25 per cent of their seats with it.

As a first attempt, Medical Education Minister Dr Sharan Prakash Patil had a meeting with representatives of deemed medical universities in the state on Thursday. He requested the varsities to give 25 per cent of their seats to the government.



However, the representatives present in the meeting said they would discuss and get back to the government soon.

A representative of a deemed medical university said, "We are not the decision making authorities and we need to discuss the matter with our management."

There are nine deemed medical universities in the state, which have around 1,150 under graduate medical seats.

If they agree to give 25 per cent of their seats, then the number of government quota seasts will increase by 412 .

This exercise of convincing the universities to share seats is going on since several years. But only a few of them are giving seats voluntarily. The others say they will share the seats oly when they get an enhancement in existing intake.

HEALTH MATTERS

# 5,000 more post graduate seats in medical institutes

NEW DELHI: As many as 5,000 additional post-graduate (PG) seats have been created in medical institutions in the country and the budget allocation for the health sector in the coming fiscal has been increased by 28 per cent, Lok Sabha was informed on Friday.

## What steps have been taken?

Health Minister J P Nadda said the government has taken a number of steps to improve the health sector in the country including creation of 5,000 additional PG seats in medical institutions. "There has been 27.7 per cent more allocation to the health sector in the 2017-18 budget. We are also planning to allocate 2.5 per cent of the GDP to the health sector in phase-wise," he said during Question Hour.

## Are the states utilising the funds?

However, many state governments have returned the funds earmarked for the health sector as they have not been able to spend them, he said. The Minister said the Centre has been offering help to the states to improve infrastructure and institutions in the health sector besides providing financial support, but the states have to spend the funds properly and submit the utilisation certificates.

## How are surgeries handled?

Responding to another question, the Minister said there was no specific norm for performing surgeries. However, in emergency cases, such surgeries are performed immediately on priority in central government hospitals and institutions. Nadda said the number of patients visiting central government hospitals and institutions, including the AIIMS here, for surgery and treatment was much larger compared to their handling capacity in terms of number of beds, manpower and other resources. "Despite availability of huge infrastructure and other services in these hospitals, there is a waiting period for certain procedures due to the ever-increasing pressure on infrastructure and available manpower which varies from department to department," he said. *PTI*



## ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ಘಟಿಕೋತ್ಸವ

# ಹಣ ಗಳಿಕೆ ವೈದ್ಯರ ಸಂಖ್ಯೆ ಹೆಚ್ಚಳ ದುರಂತ

ಪ್ರಜಾವಾಣಿ ವಾರ್ತೆ

ಕೋಲಾರ: 'ವೈದ್ಯಕೀಯ ಸೇವೆ ನೀಡುವ ವೈದ್ಯರಿಗಿಂತ ಹಣ ಗಳಿಸುವ ವೈದ್ಯರ ಸಂಖ್ಯೆಯೇ ಹೆಚ್ಚುತ್ತಿರುವುದು ದುರಂತ' ಎಂದು ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ವಿಷಾದಿಸಿದರು.

ನಗರದಲ್ಲಿ ಶುಕ್ರವಾರ ನಡೆದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, 'ಇತ್ತೀಚಿನ ದಿನಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಕೇಂದ್ರಗಳ ಸಂಖ್ಯೆ ಹೆಚ್ಚುತ್ತಿದೆ. ಆದರೆ, ವೈದ್ಯರು ರೋಗಿಗಳಿಗೆ ಗುಣಮಟ್ಟದ ವೈದ್ಯಕೀಯ ಸೇವೆ ನೀಡದೆ ವಂಚಿಸುತ್ತಿದ್ದಾರೆ' ಎಂದು ಅಭಿಪ್ರಾಯಪಟ್ಟರು.

'ಒತ್ತಡದ ಜೀವನಶೈಲಿ ಮತ್ತು ಕಾರ್ಯ ಒತ್ತಡದಿಂದ ಹೃದಯ ಸಂಬಂಧಿ ಸಮಸ್ಯೆಗಳು ಹೆಚ್ಚುತ್ತಿವೆ. ಜಪಾನ್, ಅಮೆರಿಕದಲ್ಲಿ 50ರಿಂದ 60 ವರ್ಷ ವಯೋಮಾನದವರಲ್ಲಿ ಹೃದಯ ಸಂಬಂಧಿ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಆದರೆ, ಭಾರತದಲ್ಲಿ 25ರಿಂದ 30 ವರ್ಷ ವಯೋಮಾನದವರೆ ಹೃದ್ರೋಗಕ್ಕೆ ತುತ್ತಾಗುತ್ತಿದ್ದಾರೆ' ಎಂದರು.

'ಜಯದೇವ ಆಸ್ಪತ್ರೆಗೆ ಬರುವ ಹೃದ್ರೋಗಿಗಳ ಪೈಕಿ ಶೇ 25ರಷ್ಟು ಮಂದಿ 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರು.





ಕೋಲಾರದಲ್ಲಿ ಶುಕ್ರವಾರ ನಡೆದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಘಟಿಕೋತ್ಸವದಲ್ಲಿ ವೈದ್ಯಕೀಯ ಪದವೀಧರರು ಪಾಲ್ಗೊಂಡಿದ್ದರು (ಎಡಚಿತ್ರ). ಘಟಿಕೋತ್ಸವದಲ್ಲಿ ರ್‍ಯಾಂಕ್ ವಿಜೇತೆ ಡಾ.ನವ್ಯಾ ಅವರಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು

18 ವರ್ಷದೊಳಗಿನ ಯುವಕರು ಸಹ ಹೃದ್ರೋಗ ಪೀಡಿತರಾಗಿದ್ದಾರೆ. 2020ರ ವೇಳೆಗೆ ದೇಶವು ಹೃದ್ರೋಗಿಗಳ ಪಟ್ಟಿಯಲ್ಲಿ ಜಾಗತಿಕವಾಗಿ ಅಗ್ರಸ್ಥಾನಕ್ಕೆ ಏರಲಿದೆ' ಎಂದು ಕಳವಳ ವ್ಯಕ್ತಪಡಿಸಿದರು.

**ಸಾಕಷ್ಟು ಸವಾಲು:** 'ಮಹಿಳೆಯರು ಈಗ ಪುರುಷರಿಗೆ ಸರಿ ಸಮನಾಗಿ ದುಡಿಯುತ್ತಿದ್ದಾರೆ. ಅವರು ಪತಿ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾರೆ. ಆದರೆ, ತಮ್ಮ ಆರೋಗ್ಯ ನಿರ್ಲಕ್ಷಿಸಿ ವೈದ್ಯರ ಬಳಿ ಹೋಗುವುದಕ್ಕೆ ನಿಧಾನ ಮಾಡುತ್ತಾರೆ. 35 ವರ್ಷ ದಾಟಿದ ಪುರುಷರು ಹಾಗೂ 45 ವರ್ಷ ದಾಟಿದ ಮಹಿಳೆಯರು ವರ್ಷಕ್ಕೊಮ್ಮೆ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಬೇಕು' ಎಂದರು.

'ನಿಯಮಿತ ಆಹಾರ ಸೇವನೆ, ವ್ಯಾಯಾಮ, ಸದಭಿರುಚಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಹೃದಯ ಸಂಬಂಧಿ ಸಮಸ್ಯೆಗಳಿಂದ ದೂರವಿರಲು ಸಾಧ್ಯ. ಹೃದ್ರೋಗವನ್ನು ನಿರ್ಲಕ್ಷಿಸುವುದು ಸರಿಯಲ್ಲ. ಜಾಗತಿಕವಾಗಿ ವೈದ್ಯಕೀಯ ಕ್ಷೇತ್ರಕ್ಕೆ ಸಾಕಷ್ಟು ಸವಾಲುಗಳಿವೆ. ಈ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ವೈದ್ಯರು ಬೆಳೆಸಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

ವೈದ್ಯಕೀಯ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾ ಕೋರ್ಸ್‌ನಲ್ಲಿ ರ್‍ಯಾಂಕ್ ಪಡೆದ ಡಾ.ಆರ್.ಯಶಸ್ವಿನಿ, ಡಾ.ಆರ್.ನಿಖಿಲಾ, ಡಾ.ಕೆ.ದಿಲೀಪ್ ಕುಮಾರ್, ಡಾ.ಟಿ.ಸಿ.ಸುಪ್ರಿಯಾ, ಡಾ.ಎಸ್.ಚೈತ್ರಾ, ಡಾ.ನವ್ಯಾ ಅವರಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಜತೆಗೆ 271 ವೈದ್ಯಕೀಯ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

ದೇವರಾಜ ಅರಸು ಶಿಕ್ಷಣ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಆರ್.ಎಲ್.ಜಾಲಪ್ಪ, ಕಾರ್ಯದರ್ಶಿ ಜಿ.ಎಚ್.ನಾಗರಾಜ್, ದೇವರಾಜ ಅರಸು ವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್, ಉಪ ಕುಲಪತಿ ಡಾ.ಸಿ.ವಿ.ರಘುವೀರ್, ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರ ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಇದ್ದರು.

**ಮುಖ್ಯಾಂಶಗಳು**

- ಗುಣಮಟ್ಟದ ಸೇವೆ ನೀಡದೆ ವಂಚನೆ
- ಹೃದ್ರೋಗ ನಿರ್ಲಕ್ಷಿಸುವುದು ಸರಿಯಲ್ಲ
- ವೈದ್ಯಕೀಯ ತಪಾಸಣೆ ಮಾಡಿಸಿ

ಈಗ ಪ್ರತಿಯೊಬ್ಬರೂ ಒಂದೊಂದು ರೀತಿಯ ಒತ್ತಡ ಎದುರಿಸುತ್ತಿದ್ದಾರೆ. ಮನುಷ್ಯನ ಮುಖದಲ್ಲಿ ನಗು ಮಾಯವಾಗಿದೆ. ಸ್ತನ ಕ್ಯಾನ್ಸರ್ ಸಹ ಜೀವನ ಶೈಲಿಯಿಂದ ಬರುವ ಕಾಯಿಲೆ.

-ಡಾ.ಸಿ.ಎನ್.ಮಂಜುನಾಥ್, ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ

ವಿಧಾನ ಪರಿಷತ್ತಿನಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಹೇಳಿಕೆ

# ಡೀಮ್ಡ್ ವಿ.ವಿ: ಶೇ25ರಷ್ಟು ಸೀಟು ಪಡೆಯಲು ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿನ ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಶೇ 25ರಷ್ಟು ಸೀಟುಗಳನ್ನು ರಾಜ್ಯ ಸರ್ಕಾರದ ಸ್ವಾಧೀನಕ್ಕೆ ಪಡೆಯುವ ಪ್ರಯತ್ನ ನಡೆಯುತ್ತಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಹೇಳಿದರು.

ಕರ್ನಾಟಕ ವೃತ್ತಿಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ಮಸೂದೆ 2017ರ ಮೇಲೆ ವಿಧಾನ ಪರಿಷತ್ತಿನಲ್ಲಿ ನಡೆದ ಚರ್ಚೆಯಲ್ಲಿ ಅವರು ಮಾತನಾಡಿದರು.

ಡೀಮ್ಡ್ ವಿಶ್ವವಿದ್ಯಾಲಯಗಳು ಯುಜಿಸಿ ಕಾಯ್ದೆ ಪ್ರಕಾರ ನಡೆಯುತ್ತವೆ. ಖಾಸಗಿ ಮತ್ತು ಅಲ್ಪಸಂಖ್ಯಾತ ಕಾಲೇಜುಗಳಂತೆ ರಾಜ್ಯ ಸರ್ಕಾರಕ್ಕೆ ಸೀಟುಗಳನ್ನು ಬಿಟ್ಟು ಕೊಡುತ್ತಿರಲಿಲ್ಲ. ಈಗ ಎನ್‌ಇಇಟಿ ಮೆರಿಟ್ ಆಧಾರದ ಮೇಲೆ ಸರ್ಕಾರವೇ ಸೀಟು ಹಂಚಿಕೆ ಕೌನ್ಸೆಲಿಂಗ್ ನಡೆಸುವುದರಿಂದ ಅಲ್ಲಿನ ಕೆಲವು ಸೀಟುಗಳನ್ನು ಈ ಕೋಟಾದಡಿ ಹಂಚಿಕೆ ಮಾಡಲಾಗುವುದು ಎಂದರು.

ಡೀಮ್ಡ್ ವಿ.ವಿಗಳ ಪ್ರತಿನಿಧಿಗಳ ಜೊತೆ ಈಗಾಗಲೇ ಮಾತುಕತೆ ನಡೆಸಲಾಗಿದೆ. ಶೀಘ್ರದಲ್ಲೇ ಮತ್ತೊಮ್ಮೆ ಚರ್ಚೆ ಮಾಡಲಾಗುವುದು ಎಂದರು.

**ಕೇಂದ್ರೀಕೃತ ಕೌನ್ಸೆಲಿಂಗ್:** 'ಖಾಸಗಿ, ಅಲ್ಪಸಂಖ್ಯಾತ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಅನಿವಾಸಿ ಭಾರತೀಯ (ಎನ್‌ಆರ್‌ಐ) ಕೋಟಾದ ಸೀಟುಗಳನ್ನು ಹೊರತುಪಡಿಸಿ, ಉಳಿದ ಸೀಟುಗಳಿಗೆ ಸರ್ಕಾರವೇ ಕೇಂದ್ರೀಕೃತ ಕೌನ್ಸೆಲಿಂಗ್ ನಡೆಸಲಿದೆ' ಎಂದು ಸಚಿವರು ಹೇಳಿದರು.

'ಈ ಕೇಂದ್ರೀಕೃತ ಕೌನ್ಸೆಲಿಂಗ್ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಅನ್ವಯ ಆಗುತ್ತದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ (ಕೆಇಎ) ಕೌನ್ಸೆಲಿಂಗ್ ನಡೆಸಲಿದೆ' ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್‌ನ ವಿ.ಎಸ್. ಉಗ್ರಪ್ಪ, 'ಬೇರೆ ರಾಜ್ಯದಿಂದ ಬಂದು ಖಾಸಗಿ ಅಥವಾ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ 5 ವರ್ಷಗಳ ವೈದ್ಯಕೀಯ ಪದವಿ ಪಡೆದವರಿಗೂ ಸ್ನಾತಕೋತ್ತರ ಪದವಿಯಲ್ಲಿ ಕರ್ನಾಟಕದ ಅಭ್ಯರ್ಥಿ ಎಂದು ಪರಿಗಣಿಸಲಾಗುತ್ತದೆ. ಇದರಿಂದ ಮೂಲ ಕನ್ನಡಿಗ ವಿದ್ಯಾರ್ಥಿಗಳಿಗೆ ಅನ್ಯಾಯ ಆಗುತ್ತದೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಚರ್ಚೆ ಬಳಿಕ ಮಸೂದೆಗೆ ಪರಿಷತ್ತಿನಲ್ಲಿ ಅನುಮೋದನೆ ನೀಡಲಾಯಿತು.

ವಿಧಾನಸಭೆಯು ಈಗಾಗಲೇ ಈ ಮಸೂದೆಗೆ ಒಪ್ಪಿಗೆ ನೀಡಿದೆ.



ವಿಧಾನಪರಿಷತ್ತಿನಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಮಾತನಾಡಿದರು.

## ಸೀಟು ಹಂಚಿಕೆ ಹೀಗಿರಲಿದೆ...

**ವೈದ್ಯಕೀಯ, ದಂತ ವೈದ್ಯಕೀಯ ಪದವಿ** (ಸರ್ಕಾರಿ ಕಾಲೇಜುಗಳು)
ರಾಜ್ಯ ಮತ್ತು ಕೇಂದ್ರ ಸರ್ಕಾರ ತಲಾ ಶೇ 50ರಷ್ಟು ಸೀಟು ಹಂಚಿಕೆ

**ಖಾಸಗಿ ಕಾಲೇಜುಗಳು:**
ಶೇ 40ರಷ್ಟು ಸೀಟುಗಳನ್ನು ರಾಜ್ಯ ಸರ್ಕಾರಕ್ಕೆ ನೀಡಬೇಕು

**ಭಾಷಾ ಹಾಗೂ ಧಾರ್ಮಿಕ ಅಲ್ಪಸಂಖ್ಯಾತ ಕಾಲೇಜುಗಳು:**
ಶೇ 25ರಷ್ಟು ಸೀಟುಗಳನ್ನು ರಾಜ್ಯಕ್ಕೆ ಬಿಟ್ಟು ಕೊಡಬೇಕು.

**ಸ್ನಾತಕೋತ್ತರ ಪದವಿ ಸರ್ಕಾರಿ ಕಾಲೇಜುಗಳು:**
ರಾಜ್ಯ ಮತ್ತು ಕೇಂದ್ರ ಸರ್ಕಾರ ತಲಾ ಶೇ 50ರಷ್ಟು ಹಂಚಿಕೆ.

**ಖಾಸಗಿ ಕಾಲೇಜುಗಳು:** ಶೇ 33 ರಷ್ಟು ಸೀಟು ರಾಜ್ಯಕ್ಕೆ ಬಿಡಬೇಕು

**ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತ ಕಾಲೇಜುಗಳು:** ಶೇ 20 ರಷ್ಟು ಸೀಟುಗಳನ್ನು ಸರ್ಕಾರಕ್ಕೆ ನೀಡಬೇಕು.

> ಖಾಸಗಿ, ಅಲ್ಪಸಂಖ್ಯಾತ ಕಾಲೇಜುಗಳು, ಡೀಮ್ಡ್ ವಿಶ್ವವಿದ್ಯಾಲಗಳು ವೈದ್ಯಕೀಯ ಮತ್ತು ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ನ ಶೇ 30ರಷ್ಟು ಸೀಟುಗಳನ್ನು ಕನ್ನಡಿಗ ಅಭ್ಯರ್ಥಿಗಳಿಗೆ ಮೀಸಲಿಡಬೇಕು
>
> **ಶರಣ ಪ್ರಕಾಶ ಪಾಟೀಲ**
> ವೈದ್ಯಕೀಯ ಶಿಕ್ಷಣ ಸಚಿವ

# ವಿಚಾರ ಸಂಕಿರಣಕ್ಕೆ ಹಾಜರಾತಿ ಕಡ್ಡಾಯ

## ವೈದ್ಯರ ನೋಂದಣಿ, ನವೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯರು ಇನ್ನು ಮುಂದೆ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು. ಗೈರಾಗುವವರ ವೃತ್ತಿ ನೋಂದಣಿ ಹಾಗೂ ನವೀಕರಣ ಮಾಡುವುದಿಲ್ಲ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದ್ದಾರೆ.

ಕರ್ನಾಟಕ ವೈದ್ಯಕೀಯ ನೋಂದಣಿ(ತಿದ್ದುಪಡಿ) ಮಸೂದೆಯನ್ನು ಶುಕ್ರವಾರ ವಿಧಾನಪರಿಷತ್ತಿನಲ್ಲಿ ಮಂಡಿಸಿ ಅವರು ಮಾತನಾಡಿದರು.

'ವೈದ್ಯರು ವೈದ್ಯ ವಿಜ್ಞಾನದಲ್ಲಿ ಆಗುತ್ತಿರುವ ಬೆಳವಣಿಗೆ ಮತ್ತು ಬದಲಾವಣೆಗಳಿಗೆ ಸಂಬಂಧಿಸಿದ ಜ್ಞಾನ ವೃದ್ಧಿಸಿಕೊಳ್ಳಬೇಕು. ಅದರಿಂದ ರೋಗಿಗಳಿಗೆ ಹೆಚ್ಚಿನ ಪ್ರಯೋಜನವಾಗಲಿದೆ. ವೈದ್ಯರ ಹಿತಾಸಕ್ತಿ ರಕ್ಷಣೆಗಿಂತ ಬಡ ರೋಗಿಗಳ ಮೇಲಿನ ಕಾಳಜಿ ನಮಗೆ ಮುಖ್ಯ'ಎಂದು ಸಚಿವರು ಹೇಳಿದರು.

'ಪ್ರತಿಯೊಬ್ಬ ವೈದ್ಯ ಐದು ವರ್ಷಕ್ಕೊಮ್ಮೆ ನೋಂದಣಿ ನವೀಕರಿಸಬೇಕು. ನವೀಕರಣಕ್ಕೆ ಮುನ್ನ ಕರ್ನಾಟಕ ವೈದ್ಯಕೀಯ ಪರಿಷತ್ತು ಅನುಮೋದಿಸಿದ ಯಾವುದೇ ಪರಿಷತ್ತು ಅಥವಾ ಸಂಸ್ಥೆಗಳು ನಡೆಸುವ ವೈದ್ಯಕೀಯ ಸಮ್ಮೇಳನ, ವಿಚಾರ ಸಂಕಿರಣ ಅಥವಾ ಕಾರ್ಯಾಗಾರದಲ್ಲಿ ಭಾಗಿಯಾದ ಬಗ್ಗೆ ದಾಖಲೆಯೊಂದಿಗೆ ಅರ್ಜಿ ಸಲ್ಲಿಸಬೇಕು' ಎಂದು ಸ್ಪಷ್ಟಪಡಿಸಿದರು.

'ವಿಚಾರಸಂಕಿರಣ ಅಥವಾ ಕಾರ್ಯಾಗಾರದಲ್ಲಿ ಭಾಗವಹಿಸುವುದನ್ನು ವೈದ್ಯಕೀಯ ಶಿಕ್ಷಣದ ಮುಂದುವರಿಕೆ ಕಾರ್ಯಕ್ರಮ ಎಂಬುದಾಗಿ ಪರಿಗಣಿಸಲಾಗುತ್ತದೆ' ಎಂದೂ ಸಚಿವರು ವಿವರಿಸಿದರು. ವೈದ್ಯಕೀಯ ವೃತ್ತಿ ನೋಂದಣಿಯನ್ನು ಆನ್‌ಲೈನ್ ಮೂಲಕ ಮಾಡುವುದರ ಜತೆಗೆ ಆಧಾರ್ ಸಂಖ್ಯೆ ಜೋಡಣೆ ಮಾಡಲಾಗುವುದು ಎಂದು ಅವರು ತಿಳಿಸಿದರು.

'ವೈದ್ಯರುಗಳಿಗೆ ವಿಚಾರ ಸಂಕಿರಣ, ಕಾರ್ಯಾಗಾರ ಕಡ್ಡಾಯ ಮಾಡುವುದು ಸರಿಯಲ್ಲ' ಎಂದು ಬಿಜೆಪಿ ಸದಸ್ಯರಾದ ಗಣೇಶ್ ಕಾರ್ಣಿಕ್, ಮಹಾಂತೇಶ್ ಕವಟಗಿಮಠ, ಎಸ್.ವಿ.ಸಂಕನೂರ, ಅಮರನಾಥ ಪಾಟೀಲ ಹೇಳಿದರು.

ಚರ್ಚೆ ಬಳಿಕ ಮಸೂದೆಗೆ ಅಂಗೀಕಾರ ನೀಡಲಾಯಿತು.

ವಿಜಯ ಕರ್ನಾಟಕ



ದೇವರಾಜ್ ಅರಸ್ ಉನ್ನತ ಶಿಕ್ಷಣ, ಸಂಶೋಧನಾ ಸಂಸ್ಥೆಯ ಘಟಿಕೋತ್ಸವ, 200 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

# ಒತ್ತಡ ನಿವಾರಣೆಗೆ ಜೀವನ ಶೈಲಿ ಬದಲಿಸಿ

■ **ವಿಕ ಸುದ್ದಿಲೋಕ** ಕೋಲಾರ

'ಒತ್ತಡದ ಬದುಕಿನಿಂದಾಗಿ ಭಾರತದಲ್ಲಿ ದಿನೇದಿನೆ ಹೃದ್ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಇದು ಆತಂಕಕಾರಿ ಬೆಳವಣಿಗೆ' ಎಂದು ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ತಿಳಿಸಿದರು.

ನಗರದ ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ಘಟಿಕೋತ್ಸವದಲ್ಲಿ ಭಾಷಣ ಮಾಡಿದ ಅವರು, ಹೃದಯ ಸಂಬಂಧಿ ಕಾಯಿಲೆಗಳಿಂದ ಪ್ರತಿ ವರ್ಷ ಶೇ.25ರಷ್ಟು ಜನರು ಸಾವನ್ನಪ್ಪುತ್ತಿದ್ದಾರೆ ಎಂದರು.

**ಯುವ ಜನರಿಗೆ ಹೃದಯಾಘಾತ:** ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ 30ರಿಂದ 40ರ ವಯೋಮಿತಿಯಲ್ಲಿರುವ ಶೇ.25ರಷ್ಟು ಜನರು ಹೃದಯಾಘಾತಕ್ಕೆ ಬಲಿಯಾಗುತ್ತಿದ್ದಾರೆ. ಇದು ಅತ್ಯಂತ ಆತಂಕದ ಸಂಗತಿ. ಆದರೆ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ 50ರಿಂದ 60 ವರ್ಷದ ವಯೋಮಾನದವರಲ್ಲಿ ಹೃದ್ರೋಗಗಳು ಕಾಣಿಸಿಕೊಳ್ಳುತ್ತಿವೆ. ಶ್ರೀಲಂಕಾ ಮತ್ತು ಬಾಂಗ್ಲಾದೇಶದಲ್ಲಿ ಇಂತಹ ಪರಿಸ್ಥಿತಿ ಇಲ್ಲ. ಇದಕ್ಕೆ ನಮ್ಮ ಬದಲಾದ ಜೀವನ ಶೈಲಿ ಹಾಗೂ ಅಧಿಕ ಒತ್ತಡವೇ ಕಾರಣ ಎಂದು ಹೇಳಿದರು.

ದೇಶದಲ್ಲಿ ಶೇ.30ರಿಂದ 40ರಷ್ಟು ಜನರು ಹೃದ್ರೋಗ, ಅಧಿಕ ರಕ್ತದ ಒತ್ತಡ, ಮಧುಮೇಹ ಹಾಗೂ ಕ್ಯಾನ್ಸರ್ ರೋಗಗಳಿಂದ ಬಳಲುತ್ತಿದ್ದಾರೆ. ಬದಲಾದ ಜೀವನ ಶೈಲಿಯಲ್ಲಿ ಮನುಷ್ಯರೇ ಸೃಷ್ಟಿಸಿಕೊಳ್ಳುತ್ತಿರುವ ರೋಗಗಳಾಗಿವೆ. ಶೇ.50ರಷ್ಟು ಕಾಯಿಲೆಗಳು ನಮ್ಮ ಜೀವನ ಶೈಲಿಯ ಕಾರಣದಿಂದ ಬರುತ್ತಿವೆ. ಆದ್ದರಿಂದ ಒತ್ತಡ ನಿವಾರಣೆಯ ಕಾರ್ಯ ಇಂದು ಅತ್ಯಂತ ತುರ್ತಾಗಿ ಆಗಬೇಕಿದೆ ಎಂದು ಡಾ. ಮಂಜುನಾಥ್ ತಿಳಿಸಿದರು.

ನಮ್ಮ ಬದಲಾದ ಜೀವನ ಶೈಲಿ, ದೈಹಿಕ ಚಟುವಟಿಕೆಗಳನ್ನು ಮಾಡದಿರುವುದು ಹಾಗೂ ನಿಯಮಿತವಲ್ಲದ ಆಹಾರ ಪದ್ಧತಿಯಿಂದಾಗಿ ಬೊಜ್ಜು ರೋಗಿಗಳ ಸಂಖ್ಯೆಯಲ್ಲೂ ಹೆಚ್ಚಳವಾಗುತ್ತಿದೆ. ಖಾಸಗಿ ಸಂಸ್ಥೆಯೊಂದು ನಡೆಸಿದ ಅಂಕಿಅಂಶಗಳ ಪ್ರಕಾರ, ಶೇ.52ರಷ್ಟು ಭಾರತೀಯರು ಸೋಮಾರಿಗಳಾಗಿದ್ದಾರೆ. ಆರು ಗಂಟೆಗಳಿಗೂ ಹೆಚ್ಚು ಸಮಯ ಕುಳಿತಲ್ಲೇ ಕೆಲಸ ಮಾಡುವವರಲ್ಲಿ ಮಧುಮೇಹ ಹಾಗೂ ಹೃದಯ ಸಂಬಂಧ ಕಾಯಿಲೆಗಳು ಉತ್ತಮ ದೈಹಿಕ ಚಟುವಟಿಕೆಗಳಿಂದ ಕೂಡಿ ದ್ದರೆ, ಈ ಕಾಯಿಲೆಗಳನ್ನು ಬಾರದಂತೆ ತಡೆಯಬಹುದಾಗಿದೆ ಎಂದರು.

**ರೋಗಿಗಳೊಂದಿಗೆ ತಾಳ್ಮೆಯಿಂದ ವರ್ತಿಸಿ:** ರೋಗಿ ಹಾಗೂ ಕಾಯಿಲೆಯ ಇತಿಹಾಸವನ್ನು ನಿಖರವಾಗಿ ದಾಖಲು ಮಾಡುವುದು ವೈದ್ಯಕೀಯ ವೃತ್ತಿಯ ಮೂಲ



ಕೋಲಾರದ ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 7ನೇ ಘಟಿಕೋತ್ಸವದಲ್ಲಿ ಎಂಬಿಬಿಎಸ್‌ನಲ್ಲಿ ಚಿನ್ನದ ಪದಕ ಪಡೆದ ಡಾ.ನವ್ಯಾ ಅವರಿಗೆ ಚಿನ್ನದ ಪದಕ ಹಾಗೂ ಪದವಿ ಪ್ರಮಾಣ ಪತ್ರಪ್ರದಾನ ಮಾಡಲಾಯಿತು.

ದೇಶದಲ್ಲಿ ಹೃದ್ರೋಗಿಗಳ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ
ಡಾ. ಮಂಜುನಾಥ್

## ಮೂಲಸೌಕರ್ಯ ಒದಗಿಸದೆ ಗ್ರಾಮೀಣ ಭಾಗಗಳಲ್ಲಿ ವೈದ್ಯರ ಸೇವೆ ಕಡ್ಡಾಯ ಸರಿಯಲ್ಲ

ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಲು ವೈದ್ಯರು ಮುಂದಾಗುತ್ತಿಲ್ಲ ಎಂಬ ಆರೋಪಗಳು ಸಹ ನಮ್ಮ ಮೇಲಿವೆ. ಆದರೆ ಸೂಕ್ತ ಮೂಲಸೌಕರ್ಯಗಳನ್ನು ಒದಗಿಸದೆ, ಗ್ರಾಮೀಣ ಭಾಗಗಳಲ್ಲಿ ಸೇವೆ ಸಲ್ಲಿಸಿ ಎಂದು ಹೇಳಿದರೆ ಹೇಗೆ? ಎಂದು ಪ್ರಶ್ನಿಸಿದ ಡಾ.ಮಂಜುನಾಥ್, ಗ್ರಾಮೀಣ ಭಾಗದಲ್ಲಿರುವ ಆಸ್ಪತ್ರೆಗಳಲ್ಲಿ ಉತ್ತಮ ಸೌಕರ್ಯಗಳನ್ನು ಕಲ್ಪಿಸಿದರೆ ಸೇವೆ ಸಲ್ಲಿಸಲು ಎಲ್ಲಾ ವೈದ್ಯರು ಸಿದ್ಧರಿದ್ದಾರೆ ಎಂದು ಡಾ. ಸಿ.ಎನ್. ಮಂಜುನಾಥ್ ತಿಳಿಸಿದರು.

'ಇತ್ತೀಚಿನ ದಿನಗಳಲ್ಲಿ ವೈದ್ಯರ ಮೇಲಿನ ಹಲ್ಲೆ ಪ್ರಕರಣಗಳು ಹೆಚ್ಚುತ್ತಿದ್ದು, ವೈದ್ಯರಿಗೆ ರಕ್ಷಣೆ ಇಲ್ಲದಂತಾಗಿದೆ,' ಎಂದು ಡಾ.ಸಿ.ಎನ್. ಮಂಜುನಾಥ್ ಆತಂಕ ವ್ಯಕ್ತಪಡಿಸಿದರು. ನಾನಾ ಕಾರಣಗಳಿಂದಾಗಿ ರೋಗಿ ಮೃತಪಟ್ಟರೆ, ವೈದ್ಯರ ವಿರುದ್ಧ ಆರೋಪ ಮಾಡಲಾಗುತ್ತದೆ. ಜತೆಗೆ ಅವರ ಮೇಲೆ ದೈಹಿಕ ಹಲ್ಲೆಗಳು ನಡೆಯುತ್ತಿವೆ. ಈ ಘಟನೆಗಳು ವೈದ್ಯರ ಆತ್ಮಸ್ಥೈರ್ಯ ಕುಸಿಯುವಂತೆ ಮಾಡುತ್ತಿದೆ ಎಂದು ದೂರಿದರು. ವೈದ್ಯರಿಗೂ ಕಾನೂನಿನ ರಕ್ಷಣೆಯಿದೆ. ಒಂದು ವೇಳೆ ದೈಹಿಕ ಹಲ್ಲೆಗಳು ನಡೆದರೆ, ಜಾಮೀನುರಹಿತ ಪ್ರಕರಣ ದಾಖಲು ಮಾಡಬಹುದಾಗಿದೆ. ಆದ್ದರಿಂದ ವೈದ್ಯರು ತಮ್ಮ ಮೇಲೆ ನಡೆಯುವ ಯಾವುದೇ ದೌರ್ಜನ್ಯದ ವಿರುದ್ಧ ಹತ್ತಿರದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಬೇಕು ಎಂದು ಸಲಹೆ ನೀಡಿದರು.



»02
ಕೋಲಾರದ ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 7ನೇ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದ ವೈದ್ಯಕೀಯ ವಿದ್ಯಾರ್ಥಿಗಳು.

# ಹಣ ಗಳಿಸುವ ವೈದ್ಯರ ಸಂಖ್ಯೆ ಹೆಚ್ಚಳ

## ದೇವರಾಜ ಅರಸು ಉನ್ನತ ಶಿಕ್ಷಣ ಘಟಿಕೋತ್ಸವದಲ್ಲಿ ಡಾ.ಮಂಜುನಾಥ್ ಬೇಸರ

■ ವಿಜಯವಾಣಿ ಸುದ್ದಿಜಾಲ ಕೋಲಾರ

ಇತ್ತೀಚಿನ ದಿನಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಕೇಂದ್ರಗಳ ಸಂಖ್ಯೆ ಹೆಚ್ಚುತ್ತಿದೆ. ಆದರೆ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡದೆ ಹಣಗಳಿಕೆಗೆ ಆದ್ಯತೆ ನೀಡುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ ಎಂದು ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಬೇಸರಿಸಿದರು.

ಟಮಕದ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ಘಟಿಕೋತ್ಸವದಲ್ಲಿ ಮಾತನಾಡಿ, ಆರೋಗ್ಯ ಸೇವೆ ನೀಡುವ ವೈದ್ಯರಿಗಿಂತ ಹಣಗಳಿಸುವ ವೈದ್ಯರೇ ಹೆಚ್ಚಾಗುತ್ತಿರುವುದು ದುರಂತದ ಸಂಗತಿ ಎಂದರು.

- 25-30 ವರ್ಷದವರಲ್ಲಿ ಕಾಣಿಸಿಕೊಳ್ಳುವ ಕ್ಷಯರೋಗ
- 18 ವರ್ಷದೊಳಗಿನ ಯುವಕರಲ್ಲೂ ಹೃದಯ ಸಂಬಂಧಿ ಕಾಯಿಲೆ
- ಒತ್ತಡ ಹೆಚ್ಚಾದರೆ ಕಾಯಿಲೆ ಉಲ್ಬಣ
- ಸೂಕ್ತ ಸಮಯದಲ್ಲಿ ಚಿಕಿತ್ಸೆ ಅವಶ್ಯ

ಆಧುನಿಕ ಕಾಲಘಟ್ಟದಲ್ಲಿ ಮನುಷ್ಯನ ಒತ್ತಡದ ಜೀವನಶೈಲಿ ಹಾಗೂ ಕಾರ್ಯದ ಒತ್ತಡದಿಂದ ಹೃದಯ ಸಂಬಂಧಿ ಕಾಯಿಲೆ ಹೆಚ್ಚಾಗುತ್ತಿದೆ. ಜಪಾನ್, ಅಮೆರಿಕ ದೇಶಗಳಲ್ಲಿ 55-60 ವರ್ಷ ಮೇಲ್ಪಟ್ಟ ವರಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಆದರೆ ಭಾರತದಲ್ಲಿ 25-30 ವರ್ಷ ದೊಳಗಿನವರಲ್ಲೇ ಕಾಯಿಲೆಗೆ ತುತ್ತಾಗುತ್ತಿದ್ದಾರೆ ಎಂದರು.

ಜಯದೇವ ಆಸ್ಪತ್ರೆಯಲ್ಲಿ ತಪಾಸಣೆ ನಡೆಸಿದಾಗ 5 ಸಾವಿರ ಮಂದಿ ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವವರು ಪತ್ತೆಯಾಗಿದ್ದಾರೆ. ಇವರಲ್ಲಿ ಶೇ.25 ಮಂದಿ 40 ವರ್ಷಕ್ಕಿಂತ ಕಡಿಮೆಯವರು. 18 ವರ್ಷದೊಳಗಿನ ಯುವಕರು ಸಹ ಹೃದಯ ಸಂಬಂಧಿ ಕಾಯಿಲೆ ಪೀಡಿತರಾಗುತ್ತಿದ್ದಾರೆ.



1. ಕೋಲಾರದ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದ ಕಾಲೇಜು ವಿದ್ಯಾರ್ಥಿಗಳು. 2. ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

> ದೇಶದಲ್ಲಿ ಅನೇಕ ವೈದ್ಯರು ಸೇವೆ ಸಲ್ಲಿಸಿದ್ದಾರೆ. ಆದರೆ ಈಗಿನ ಪರಿಸ್ಥಿತಿಯೇ ಬೇರೆ. ಜಾಗತಿಕ ಕಾಲಘಟ್ಟದಲ್ಲಿ ವೈದ್ಯಕೀಯ ಕ್ಷೇತ್ರದಲ್ಲೂ ಅನೇಕ ಸವಾಲುಗಳಿವೆ. ಅದನ್ನು ಎದುರಿಸುವ ಶಕ್ತಿಯನ್ನು ಯುವ ವೈದ್ಯರು ಬೆಳೆಸಿಕೊಳ್ಳಬೇಕು. ವೈದ್ಯರು ರೋಗಿಗಳೊಂದಿಗೆ ಆತ್ಮೀಯತೆಯಿಂದ ಬೆರೆಯಬೇಕು. ಐದು ನಿಮಿಷ ಕಾಲ ರೋಗಿಗಳ ಸಮಸ್ಯೆ ಆಲಿಸಬೇಕು. ರೋಗಿಗಳಲ್ಲಿ ಆತ್ಮವಿಶ್ವಾಸ ಮೂಡಿದಾಗ ಶೇ.50 ಗುಣಮುಖರಾಗುತ್ತಾರೆ. ಅವರನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು.
>
> । ಡಾ.ಸಿ.ಎನ್.ಮಂಜುನಾಥ್
>
> ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ

2020ರ ವೇಳೆಗೆ ಹೃದಯ ಸಂಬಂಧಿ ರೋಗಿಗಳ ಪಟ್ಟಿಯಲ್ಲಿ ಭಾರತ ಅಗ್ರಸ್ಥಾನಕ್ಕೆ ಏರಲಿದೆ ಎಂದು ಕಳವಳಪಟ್ಟರು.

60 ವರ್ಷಗಳ ಹಿಂದೆ ಈ ಪರಿಸ್ಥಿತಿ ಇರಲಿಲ್ಲ. ಮನುಷ್ಯನ ಮೇಲಿನ ಒತ್ತಡ ಕಡಿಮೆ ಇತ್ತು. ಈಗ ಪ್ರತಿಯೊಬ್ಬರೂ ಒಂದೊಂದು ರೀತಿಯ ಒತ್ತಡ ಎದುರಿಸುತ್ತಿದ್ದಾರೆ. ಮನುಷ್ಯನ ಮುಖದಲ್ಲಿ ನಗು ವಿರಳವಾಗಿದೆ. ಸ್ತನ ಕ್ಯಾನ್ಸರ್ ಕೂಡಾ ಜೀವನಶೈಲಿಯಿಂದ ಬರುವ ಕಾಯಿಲೆಯಾಗಿದೆ. ನಿಯಮಿತ ಆಹಾರ ಸೇವನೆ, ವ್ಯಾಯಾಮ, ಸದಭಿರುಚಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಹೃದಯ ಸಂಬಂಧಿ ಕಾಯಿಲೆಗಳಿಂದ ದೂರ ಇರಲು ಸಾಧ್ಯ. ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ಸರಿಯಲ್ಲ ಎಂದರು.

ಡಾ.ಆರ್.ಯಶಸ್ವಿನಿ, ಡಾ.ಆರ್.ನಿಖಿಲಾ, ಡಾ.ಕೆ.ದಿಲೀಪ್ ಕುಮಾರ್, ಡಾ.ಟಿ.ಸಿ.ಸುಪ್ರಿಯಾ, ಡಾ.ಎಸ್.ಚೈತ್ರಾ, ಡಾ.ನವ್ಯಾ ಅವರಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಘಟಿಕೋತ್ಸವದಲ್ಲಿ ಒಟ್ಟು 271 ಮಂದಿ ವೈದ್ಯಕೀಯ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು. ಸಂಸ್ಥೆ ಅಧ್ಯಕ್ಷ ಆರ್.ಎಲ್.ಜಾಲಪ್ಪ, ಉಪ ಕುಲಪತಿ ಡಾ.ಸಿ.ವಿ.ರಘುವೀರ್, ಕುಲಪತಿ ಡಾ.ಎಸ್.ಕುಮಾರ್, ಕುಲಸಚಿವ ಡಾ.ವಿ.ಎಂ.ಕುಟ್ಟಿ, ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಪಾಲ್ಗೊಂಡಿದ್ದರು.

# ಆತ್ಮೀಯತೆಯೇ ಪರಿಣಾಮಕಾರಿ ಚಿಕಿತ್ಸಾ ವಿಧಾನ: ಡಾ.ಮಂಜುನಾಥ್

**ಕೋಲಾರ:** ವೈದ್ಯರು ಹಣ ಗಳಿಕೆಗೆ ಒತ್ತು ನೀಡಬಾರದು. ಮೊದಲು ಚಿಕಿತ್ಸೆ ನೀಡಿ ನಂತರ ಹಣ ಪಾವತಿಸಿ ಎಂಬ ತತ್ವನ್ನು ಪಾಲಿಸಬೇಕೆಂದು ಶ್ರೀಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಹೇಳಿದರು.

ನಗರದ ಶ್ರೀದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಏಳನೇ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ವೈದ್ಯರಿಗೆ ಹಣ ತಡವಾಗಿ ಬರಲು ಆರಂಭಿಸಿದರೂ ನಿರಂತರವಾಗಿರುತ್ತದೆ. ಸೇವಾ ಮನೋಭಾವದಿಂದ ವೈದ್ಯಕೀಯ ಕ್ಷೇತ್ರದಲ್ಲಿ ದುಡಿಯಬೇಕು. ದುಡಿದ ಸಂಪತ್ತಿನಲ್ಲಿ ಕೆಲಭಾಗವನ್ನು ಸಮಾಜಕ್ಕೆ ಕೊಡುಗೆ ನೀಡಬೇಕೆಂದು ಸಲಹೆ ನೀಡಿದರು.

**ಆತ್ಮೀಯ ವರ್ತನೆಯೇ ಪರಿಣಾಮಕಾರಿ:** ಆಧುನಿಕ ಜಗತ್ತಿನಲ್ಲಿ ಎಷ್ಟೇ ಅತ್ಯಾಧುನಿಕ ವೈದ್ಯೋಪಕರಣಗಳಿದ್ದರೂ ರೋಗಿಯನ್ನು ಮಾತನಾಡಿಸುತ್ತಾ, ಮುಟ್ಟುತ್ತಾ ದೇಹ ತಪಾಸಣೆ ಮಾಡಬೇಕು. ಇದು ರೋಗದ ಮೂಲವನ್ನು ಪತ್ತೆ ಹಚ್ಚಲು ಇರುವ ಪರಿಣಾಮಕಾರಿ ವಿಧಾನ ಎಂದು ಅಭಿಪ್ರಾಯಪಟ್ಟರು.

ಉತ್ತಮ ವೈದ್ಯ ರೋಗಕ್ಕೆ ಚಿಕಿತ್ಸೆ ನೀಡುತ್ತಾರೆ, ಅತ್ಯುತ್ತಮ ವೈದ್ಯ ರೋಗಿಗೆ ಚಿಕಿತ್ಸೆ ನೀಡುತ್ತಾನೆ. ರೋಗಿಯನ್ನು ವಸ್ತುವಿನಂತೆ ಭಾವಿಸಬಾರದು. ನಿರಂತರವಾಗಿ ಮಾತನಾಡಿಸುತ್ತ ಆತ್ಮಸ್ಥೈರ್ಯ ತುಂಬಬೇಕು. ರೋಗಿಯ ಆರ್ಥಿಕ ಪರಿಸ್ಥಿತಿಯ ಇತಿ ಮಿತಿಯೊಳಗೆ ಅತ್ಯುತ್ತಮ ಚಿಕಿತ್ಸೆ ನೀಡಲು ಪ್ರಯತ್ನಿಸಬೇಕು. ಯಾವುದೇ ಕಾರಣಕ್ಕೂ ರೋಗಿಯನ್ನು ತಿಂಗಳುಗಟ್ಟಲೇ ಐಸಿಯುನಲ್ಲಿಟ್ಟು ಚಿಕಿತ್ಸೆ ನೀಡಬಾರದು ಎಂದರು.

**ಅಂಗ ದಾನಕ್ಕೆ ಯತ್ನಿಸಿ:** ದೇಶದಲ್ಲಿ ಶೇ.14 ಸಾವುಗಳು ರಸ್ತೆ ಅಪಘಾತಗಳಲ್ಲಿ ಸಂಭವಿಸುತ್ತವೆ. ಇಂತಹ ಸಂದರ್ಭದಲ್ಲಿ ಮೃತರ ಅಂಗಾಂಗ ದಾನಕ್ಕೆ ವೈದ್ಯರು ಬಂಧುಗಳ ಮನವೊಲಿಸಬೇಕು. ಒಂದು ಗಂಟೆ ಸತತ ಟೀವಿ ವೀಕ್ಷಿಸಿದರೆ 20 ನಿಮಿಷ ಸಾವಿಗೆ ಹತ್ತಿರವಾಗುತ್ತಾರೆ. ಇಂತಹ ವಿಷಯಗಳನ್ನು ಜನರಿಗೆ ತಿಳಿಸುವ ಜವಾಬ್ದಾರಿ ವೈದ್ಯರದ್ದೇ ಎಂದರು.



ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಲಿಗೆ ಪದವಿ ಪ್ರದಾನ ಮಾಡಲಾಯಿತು.

ಸರ್ಕಾರ ವೈದ್ಯರಿಗೆ ಮೂಲಸೌಕರ್ಯ, ಸುರಕ್ಷತೆ, ರಕ್ಷಣೆ ಕಲ್ಪಿಸಿದರೆ ಯಾವ ವೈದ್ಯರೂ ಗ್ರಾಮೀಣ ಸೇವೆ ನಿರಾಕರಿಸುವುದಿಲ್ಲ, ಕರ್ತವ್ಯ ನಿರತ ವೈದ್ಯರ ಮೇಲೆ ಹಲ್ಲೆ ಮಾಡುವುದು ಜಾಮೀನು ರಹಿತ ಅಪರಾಧ. ವೈದ್ಯರ ಮೇಲೆ ಅಗತ್ಯವಾಗಿ ಒತ್ತಡ ಹೇರುವುದನ್ನು ಬಿಡಬೇಕು ಎಂದರು.

ಕೋಲಾರದಂತ ಗ್ರಾಮೀಣ ಭಾಗದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಿದ ಆರ್.ಎಲ್.ಜಾಲಪ್ಪ ಚಿನ್ನ ಬರಿದಾದ ಜಿಲ್ಲೆಯಲ್ಲಿರುವ ಚಿನ್ನದಂತಹ ವ್ಯಕ್ತಿ ಎಂದು ಶ್ಲಾಘಿಸಿದರು.

ಕಾಲೇಜಿನ ಸಂಸ್ಥಾಪಕ ಆರ್.ಎಲ್.ಜಾಲಪ್ಪ ಮಾತನಾಡಿ, ಡಾ.ಸಿ.ಎನ್.ಮಂಜುನಾಥ್ ಮಾತುಗಳನ್ನು ಯುವ ವೈದ್ಯರು ಜೀವನ ಪರ್ಯಂತ ಅನುಸರಿಸಬೇಕೆಂದು ಹೇಳಿದರು.

ವಿವಿಧ ಪದವಿಗಳನ್ನು ಪಡೆದ ನೂರಾರು ವಿದ್ಯಾರ್ಥಿಗಳಿಗೆ ಕುಲಪತಿ ಡಾ.ಎಸ್.ಕುಮಾರ್, ಉಪ ಕುಲಪತಿ ಡಾ.ಸಿ.ವಿ.ರಘುವೀರ್ ಪದವಿ ಪ್ರದಾನ ಮಾಡಿದರು. ವೇದಿಕೆಯಲ್ಲಿ ಕಾಲೇಜಿನ ರಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ,ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಇತರರು ಇದ್ದರು.

ಉದಯವಾಣಿ



# ವೈದ್ಯರ ನೋಂದಣಿ ವಿಧೇಯಕಕ್ಕೆ ಒಪ್ಪಿಗೆ


## ■ ವೈದ್ಯಪರಿಷತ್ತಲ್ಲಿ ವಿಭಾಗವಾರು ಪ್ರಾತಿನಿಧ್ಯ ■ ಕಂದಾಯ ವಿಭಾಗಕ್ಕೆ ನಾಮನಿರ್ದೇಶನ

**ವಿಧಾನಪರಿಷತ್ತು:** ಕರ್ನಾಟಕ ವೈದ್ಯಕೀಯ ಪರಿಷತ್ತಿನಲ್ಲಿ ವೈದ್ಯರಿಗೆ ಕಂದಾಯ ವಿಭಾಗವಾರು ಪ್ರಾತಿನಿಧ್ಯ ದೊರಕಿಸುವ ಹಾಗೂ ವೃತ್ತಿನಿರತ ವೈದ್ಯರು ಪ್ರತಿ ಐದು ವರ್ಷಕ್ಕೊಮ್ಮೆ ನೋಂದಣಿ ನವೀಕರಿಸಿಕೊಳ್ಳುವುದನ್ನು ಕಡ್ಡಾಯಗೊಳಿಸುವ 'ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ-2017ಕ್ಕೆ ಮೇಲ್ಮನೆಯಲ್ಲಿ ಧ್ವನಿಮತದ ಅನುಮೋದನೆ ದೊರಕಿತು.

ವಿಧಾನಸಭೆಯಲ್ಲಿ ಅಂಗೀಕೃತಗೊಂಡಿರುವ ತಿದ್ದುಪಡಿ ವಿಧೇಯಕವನ್ನು ಮೇಲ್ಮನೆಯಲ್ಲಿ ಶುಕ್ರವಾರ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಮಂಡಿಸಿದರು. ಸುದೀರ್ಘ ಚರ್ಚೆ ಬಳಿಕ ಧ್ವನಿಮತದ ಮೂಲಕ ವಿಧೇಯಕಕ್ಕೆ ಸದನ ಒಪ್ಪಿಗೆ ನೀಡಿತು.

ತಿದ್ದುಪಡಿ ವಿಧೇಯಕದ ಪ್ರಕಾರ, ಕರ್ನಾಟಕ ವೈದ್ಯಕೀಯ ಪರಿಷತ್ತಿನ ಚುನಾವಣೆ ಮತ್ತು ನಾಮನಿರ್ದೇಶನದಲ್ಲಿ ಪ್ರಾದೇಶಿಕ ಪ್ರಾತಿನಿಧ್ಯಕ್ಕೆ ಅವಕಾಶ ಒದಗಿಸಲಾಗಿದೆ. ಅದರಂತೆ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಿಂದ ತಲಾ ಒಬ್ಬರಂತೆ ಚುನಾಯಿಸುವುದು ಹಾಗೂ ಪ್ರತಿ ಕಂದಾಯ ವಿಭಾಗಕ್ಕೆ ಒಬ್ಬರನ್ನು ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡುವುದು ಕಡ್ಡಾಯವಾಗಲಿದೆ.

ವೈದ್ಯಕೀಯ ಪರಿಷತ್ತಿನಲ್ಲಿ ನೋಂದಣಿ ಮಾಡಿಸಿಕೊಂಡ ಪ್ರತಿಯೊಬ್ಬ ವೃತ್ತಿನಿರತ ವೈದ್ಯ ಪ್ರತಿ ಐದು ವರ್ಷಕ್ಕೊಮ್ಮೆ ನೋಂದಣಿಯನ್ನು ನವೀಕರಿಸಿಕೊಳ್ಳಬೇಕು. ಅದಕ್ಕಾಗಿ ಎಂಬಿಬಿಎಸ್ ವೈದ್ಯರು ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ಆರು 'ಪ್ರಶಂಸಾರ್ಹ ಗಂಟೆಗಳಂತೆ' (ಕ್ರೆಡಿಟ್ ಹವರ್ಸ್) ಐದು ವರ್ಷಗಳಲ್ಲಿ 30 ಕ್ರೆಡಿಟ್ ಹವರ್ಸ್‌ಗಳ ಕಾಲ ಜಿಲ್ಲಾ, ರಾಜ್ಯ ಅಥವಾ ರಾಷ್ಟ್ರಮಟ್ಟದಲ್ಲಿ ನಡೆಯುವ ಕರ್ನಾಟಕ ವೈದ್ಯಕೀಯ ಪರಿಷತ್ತು ಅನುಮೋದಿಸಿದ ಯಾವುದೇ ವೈದ್ಯಕೀಯ ಸಮ್ಮೇಳನ, ವಿಚಾರಸಂಕಿರಣ, ಕಾರ್ಯಾಗಾರ ಅಥವಾ ಮುಂದುವರಿಕೆ ವೈದ್ಯಕೀಯ ಶಿಕ್ಷಣ (ಸಿಎಂಇ) ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸಿರಬೇಕು. ವೈದ್ಯರು ಭಾಗವಹಿಸಿದ್ದರ ಬಗ್ಗೆ



ಆಧಾರಗಳೊಂದಿಗೆ ನಿಗದಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿದರೆ, ನೋಂದಣಿ ನವೀಕರಿಸಲಾಗುತ್ತದೆ. ಇಲ್ಲದಿದ್ದರೆ ನೋಂದಣಿ ರದ್ದುಗೊಳಿಸಲಾಗುತ್ತದೆ. ಕಾರ್ಯಕ್ರಮಗಳಲ್ಲಿ ಹಾಜರಾಗಿದ್ದಕ್ಕೆ ಒಳಪಟ್ಟು ನೋಂದಣಿ ನವೀಕರಿಸಿಕೊಳ್ಳಲು ಅವಕಾಶವಿರುತ್ತದೆ ಎಂದು ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ವಿವರಣೆ ನೀಡಿದರು.

ಈ ಹಿಂದೆ ಕರ್ನಾಟಕ ವೈದ್ಯಕೀಯ ಪರಿಷತ್ತಿನ ಚುನಾವಣೆ ಅಥವಾ ರಾಜ್ಯ ಸರ್ಕಾರದ ನಾಮನಿರ್ದೇಶನಗಳಲ್ಲಿ ಪ್ರಾದೇಶಿಕ ಪ್ರಾತಿನಿಧ್ಯ ಸಿಗುತ್ತಿರಲಿಲ್ಲ. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ರಾಜ್ಯದ ನಾಲ್ಕು ಕಂದಾಯ ವಿಭಾಗವಾರು ಪ್ರಾತಿನಿಧ್ಯ ದೊರಕಿಸಲು ತಿದ್ದುಪಡಿ ವಿಧೇಯಕದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಅಲ್ಲದೇ ಈಗಿನ ವೈದ್ಯಕೀಯ ಕ್ಷೇತ್ರ ಸಾಕಷ್ಟು ಮುಂದುವರಿದಿದೆ. ಚಿಕಿತ್ಸಾ ವಿಧಾನಗಳಲ್ಲಿ ಬಹಳಷ್ಟು ಬದಲಾವಣೆಗಳು ಬಂದಿವೆ. ಆಧುನಿಕ ಕಾಲಕ್ಕೆ ತಕ್ಕಂತೆ ಹಾಗೂ ಬೇಡಿಕೆಗಳಿಗೆ ಅನುಗುಣವಾಗಿ ಎಂಬಿಬಿಎಸ್ ವೈದ್ಯರು ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳುವ ಅವಶ್ಯಕತೆ ಇದೆ. ಅದಕ್ಕಾಗಿ ನೋಂದಣಿ ನವೀಕರಣಕ್ಕೆ ವೈದ್ಯಕೀಯ ಸಮ್ಮೇಳನ, ವಿಚಾರಸಂಕಿರಣ, ಕಾರ್ಯಾಗಾರ ಮತ್ತು ಸಿಎಂಇ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಷರತ್ತನ್ನು ಸೇರಿಸಲಾಗಿದೆ. 65 ವರ್ಷ ಮೀರಿದ ವೈದ್ಯರು, ಆಡಳಿತಾತ್ಮಕ ಜವಾಬ್ದಾರಿ ನಿರ್ವಹಿಸುವವರು ಅಥವಾ ಸಾರ್ವಜನಿಕ (ರಾಜಕೀಯ) ಜೀವನ ಪ್ರವೇಶಿಸಿರುವ ವೈದ್ಯರಿಗೆ ಕಾಯಿದೆಯಲ್ಲಿ ವಿನಾಯ್ತಿ ಕೊಡಲಾಗಿದೆ ಎಂದು ಸಚಿವರು ವಿಧೇಯಕವನ್ನು ಸಮರ್ಥಿಸಿಕೊಂಡರು.

## ವಾಸದ ಮನೆ ಸಕ್ರಮ ವಿಧೇಯಕಕ್ಕೆ ಅಸ್ತು

**ವಿಧಾನ ಪರಿಷತ್ತು:** ರಾಜ್ಯದ ಎಲ್ಲ ನಗರಸಭೆ ವ್ಯಾಪ್ತಿಯಿಂದ ಹೊರಗಿನ ಐದು ಕಿಮೀ ಮಿತಿಯೊಳಗೆ (ಬಫರ್‌ಝೋನ್) ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ವಾಸಕ್ಕಾಗಿ ನಿರ್ಮಿಸಿಕೊಂಡ 1200 ಚದರ ಅಡಿ ವಿಸ್ತೀರ್ಣದ ಕಟ್ಟಡಗಳನ್ನು ಸಕ್ರಮಗೊಳಿಸುವ ಸಂಬಂಧದ ಕರ್ನಾಟಕ ಭೂಕಂದಾಯ ತಿದ್ದುಪಡಿ ವಿಧೇಯಕಕ್ಕೆ ಮೇಲ್ಮನೆಯಲ್ಲಿ ಶುಕ್ರವಾರ ಅನುಮೋದನೆ ಪಡೆಯಲಾಯಿತು. ಈ ಹಿಂದೆ, ಮಹಾನಗರ ಪಾಲಿಕೆ, ಪಾಲಿಕೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಅಕ್ರಮ ಕಟ್ಟಡಗಳ ಸಕ್ರಮಕ್ಕೆ ತಿದ್ದುಪಡಿ ಮೂಲಕ ಅವಕಾಶ ನೀಡಲಾಗಿತ್ತು. ನಗರಸಭೆ ವ್ಯಾಪ್ತಿ ಇದರಿಂದ ಬಿಟ್ಟುಹೋಗಿತ್ತು. ಹೀಗಾಗಿ, ಮತ್ತೆ ಇದಕ್ಕಾಗಿ ತಿದ್ದುಪಡಿ ವಿಧೇಯಕ ಮಂಡಿಸಲಾಗಿತ್ತು. ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದ ವಿಧೇಯಕಕ್ಕೆ ಮೇಲ್ಮನೆಯಲ್ಲೂ ಒಪ್ಪಿಗೆ ದೊರೆಯಿತು.

## ಯುವ ವೈದ್ಯರಿಗೆ ಮಂಜುನಾಥ್ ನೀತಿ ಸಂಹಿತೆ

# ರೋಗಿಗೆ 'ಹೃದಯ' ಪೂರ್ವಕ ಚಿಕಿತ್ಸೆ ಕೊಡಿ

ಕೋಲಾರ: ರೋಗಿಗಳಿಗೆ ಕೇವಲ ವೈದ್ಯಕೀಯ ಉಪಕರಣಗಳಿಂದ ಚಿಕಿತ್ಸೆ ನೀಡುವ ಬದಲು ಹೃದಯದಿಂದ ಆರೈಕೆ ಮಾಡುವುದನ್ನು ರೂಢಿಸಿಕೊಳ್ಳಿ ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕರಾಗೂ ಖ್ಯಾತ ಹೃದಯತಜ್ಞ ಡಾ.ಸಿ.ಎನ್.ಮಂಜುನಾಥ್ ಯುವ ವೈದ್ಯರಿಗೆ ಕಿವಿಮಾತು ಹೇಳಿದರು.



ದೇವರಾಜ ಅರಸ್ ಆರೋಗ್ಯ ವಿವಿಯ ಏಳನೇ ಘಟಿಕೋತ್ಸವ ಕಾರ್ಯಕ್ರಮದ ಪ್ರಧಾನ ಭಾಷಣ ಮಾಡಿದ ಅವರು ತಮ್ಮ 48 ನಿಮಿಷಗಳ ನಿರರ್ಗಳ ಭಾಷಣದಲ್ಲಿ ಯುವ ವೈದ್ಯರಿಗೆ ನೀತಿ ಸಂಹಿತೆಯನ್ನೇ ಬೋಧಿಸಿದರು.

ಮಾನವೀಯತೆ ಮತ್ತು ಬದ್ಧತೆ ಇಲ್ಲದ ಯಾವುದೇ ಪದವಿಗಳು ನಿರರ್ಥಕ, ರೋಗಿಗಳಿಗೆ ಚಿಕಿತ್ಸೆ ನೀಡುವುದು ಯಾಂತ್ರೀಕೃತ ಎನಿಸದಿರಲಿ, ಅವರ ಭಾವನೆಗಳಿಗೆ ಸ್ಪಂದಿಸಿ, ವೈದ್ಯರ ನಗುಮುಖ ರೋಗಿಯ ಅರ್ಧ ಕಾಯಿಲೆ ವಾಸಿ ಮಾಡುತ್ತದೆ, ಸಹನೆ ಮತ್ತು ಕರುಣೆ ನಿಮ್ಮ ವೃತ್ತಿಯ ಭಾಗವಾಗಲಿ ಎಂದು ಬೋಧಿಸಿದರು.

ರೋಗಿಗಳನ್ನು ಅನಗತ್ಯ ಪರೀಕ್ಷೆಗಳಿಗೆ ಒಳಪಡಿಸುವ ಪರಿಪಾಠ ಬಿಡಿ. ರೋಗಿಯ ಸ್ಥಿತಿ ಗಮನಿಸಿ ಚಿಕಿತ್ಸಾ ಪದ್ಧತಿ ಅಳವಡಿಸಿಕೊಳ್ಳಿ, ಎಷ್ಟೇ ಖರ್ಚು ಮಾಡಿದರೂ ಬದುಕುಳಿಯಲಾರ ಎಂಬಂತಹ ರೋಗಿಯ ಪರಿಸ್ಥಿತಿ ಅವರ ಪಾಲಕರಿಗೆ ಮನದಟ್ಟು ಮಾಡಿಕೊಡಿ. ಅನಗತ್ಯ ಚಿಕಿತ್ಸೆಗಳ ಮೂಲಕ ತಿಂಗಳಾನುಗಟ್ಟಲೆ ಐಸಿಯುದಲ್ಲಿ ಇಟ್ಟುಕೊಂಡು ಲಕ್ಷಾಂತರರೂ. ಹಣ ಪಾವತಿಸುವಂತೆ ಮಾಡಿ ರೋಗಿಯೂ ಉಳಿಯದೆ ಬದುಕಿದ್ದವರನ್ನು ಸಂಕಷ್ಟಕ್ಕೆ ಒಳಪಡಿಸುವ ಧಾರುಣತೆ ಬೇಡ ಎಂದು ಸಲಹೆ ಮಾಡಿದರು.

ರೋಗಿಗಳ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳೂ ನಿಮ್ಮ ಚಿಕಿತ್ಸೆಯ ವೇಳೆ ಮನದಲ್ಲಿರಲಿ, ಅದಕ್ಕೆ ತಕ್ಕಂತೆ ಅವರಿಗೆ ಸ್ಪಂದಿಸಿ, ನಿಖರವಾಗಿ ರೋಗದ ಮೂಲ ಪತ್ತೆಹಚ್ಚುವುದೇ ನಿಜವಾದ ಚಿಕಿತ್ಸೆ, ರೋಗಿಯ ಪರೀಕ್ಷೆ ಮತ್ತು ಚಿಕಿತ್ಸೆ ವೇಳೆ ಮೊಬೈಲ್ ಅಥವಾ ಇತರ ವಿಚಾರಗಳತ್ತ ಗಮನ ಇರದಿರಲಿ, ವೃತ್ತಿಯ ಕಾಳಜಿ ಸದಾ ಜಾಗೃತವಾಗಿರಲಿ ಎಂದು ನುಡಿದರು.

### ಟಿ.ವಿ ಆಯಸ್ಸು ಕಡಿಮೆ ಮಾಡುತ್ತೆ

ಮದುವೆ ವೇಳೆ ಕೇವಲ ರಾಶಿಗಳ ಜಾತಕವಷ್ಟೇ ಅಲ್ಲ ವಧು ವರರ ಆರೋಗ್ಯದ ಜಾತಕವನ್ನೂ ತಾಳೆ ಹಾಕುವ ಮೂಲಕ ದಾಂಪತ್ಯವನ್ನು ಸಾಫಲ್ಯಗೊಳಿಸಬೇಕು ಎಂದು ಡಾ.ಮಂಜುನಾಥ್ ಹೇಳಿದರು.

ಒತ್ತಡದ ಜೀವನ ಶೈಲಿಯಿಂದ ಖಿನ್ನತೆ, ಮಧುಮೇಹ, ರಕ್ತದ ಒತ್ತಡ ಮಿತಿಮೀರಿ 30 ವರ್ಷಕ್ಕೆಲ್ಲ ಹೃದಯಾಘಾತ ಹೆಚ್ಚುತ್ತಿದೆ, ದೇಶದಲ್ಲಿ ಶೇ.14ರಷ್ಟು ಮಂದಿ ಆರೋಗ್ಯ ಸಮಸ್ಯೆಗಳಿಂದ, ಶೇ.38ರಷ್ಟು ಮಂದಿ ಅಪಘಾತಗಳಿಂದ ಸಾವಿಗೀಡಾಗುತ್ತಿದ್ದಾರೆ. ಯುವ ಜನತೆ ಎಚ್ಚೆತ್ತು ಆರೋಗ್ಯಪೂರ್ಣ ಜೀವನ ಕ್ರಮ ಪಾಲಿಸಬೇಕು ಎಂದು ಕರೆ ನೀಡಿದರು.

ದೇಶದ ಶೇ.52 ಮಂದಿ ಸೋಮಾರಿ ಜೀವನ ಶೈಲಿಯಿಂದ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ.

ಒಂದು ಗಂಟೆ ಸತತ ಟಿ.ವಿ ವೀಕ್ಷಣೆಯಿಂದ 20 ನಿಮಿಷದ ಆಯಸ್ಸು ಕ್ಷೀಣಿಸುತ್ತದೆ ಎಂದು ಎಚ್ಚರಿಸಿದರು.

ಪರರ ಬಗ್ಗೆ ಅಸೂಯೆ ಬಿಟ್ಟು ಸಂತೋಷದಿಂದ ಇರುವುದೇ ಆರೋಗ್ಯಪೂರ್ಣ ಜೀವನದ ಗುಟ್ಟು ಎಂದು ಸಲಹೆ ಮಾಡಿದರು.



ದೇವರಾಜು ಅರಸು ವೈದ್ಯಕೀಯ ವಿ.ವಿಯ 7ನೇ ಘಟಿಕೋತ್ಸವದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಮುನಿರಾಜು ಮತ್ತು ವಿಟ್ಟಪ್ಪನಹಳ್ಳಿ ಗ್ರಾಪಂ ಸದಸ್ಯೆ ಮಂಜುಳಾ ದಂಪತಿ ಪುತ್ರ ಡಾ.ಸೃಜನ್‌ಗೆ ಪದವಿ ಪ್ರಧಾನ ನಡೆಯಿತು.



ಕೆಲಸದಲ್ಲಿ ಯಶಸ್ಸು ಅಥವಾ ಸಾಧನೆ ಮುಖ್ಯವಲ್ಲ, ಸಂತೃಪ್ತಿಯೇ ಪ್ರಧಾನವಾಗಿರಬೇಕು ಎಂದು ಸೂಚ್ಯವಾಗಿ ನುಡಿದ ಮಂಜುನಾಥ್ ಹಣವೇ ಮುಖ್ಯವಲ್ಲ, ಗುಣವೇ ಪ್ರಧಾನ, ಸ್ವಾರ್ಥಕ್ಕಿಂತ ಸೇವೆಯೇ ಜೀವನದ ಪ್ರಮುಖ ಆದ್ಯತೆ ಆಗಲಿ ಎಂದು ಬಯಸಿದರು.

ರೋಗಿಯ ಸ್ಥಿತಿಗತಿ ಕುರಿತು ಮಾತನಾಡುವುದೇ ಇಲ್ಲ ಎಂಬುದು ಎಲ್ಲ ಕಡೆಯ ಸಾರ್ವತ್ರಿಕ ಆರೋಪ, ರೋಗಿಯ ಕಾಯಿಲೆಯ ಮೂಲ, ಆತನ ಸ್ಥಿತಿಗತಿ, ಚಿಕಿತ್ಸಾ ವಿಧಾನಗಳ ಕುರಿತು ಅವರ ಕುಟುಂಬದವರಿಗೆ ಸಂಪೂರ್ಣ ಮಾಹಿತಿ ನೀಡಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ, ರೋಗಿ ಬಂದ ವೇಳೆ ದಾಖಲೆಗಳ ನಿರ್ವಹಣೆ ಮತ್ತು ಹಣಕಾಸು ಪಾವತಿ ಕುರಿತು ಗಮನಕೊಡಬೇಡಿ, ಅಮೃತ ಗಳಿಗೆಗಳನ್ನು ವ್ಯರ್ಥ ಮಾಡಿದರೆ ಅಮೂಲ್ಯ ಜೀವಗಳನ್ನೇ ಕಳೆದುಕೊಳ್ಳಬೇಕಾಗುತ್ತದೆ. ಮೊದಲು ಚಿಕಿತ್ಸೆ ಆರಂಭಿಸಿ, ನಂತರದಲ್ಲಿ ಪ್ರಕ್ರಿಯೆಗಳಿಗೆ ಅವಕಾಶ ಇರಲಿ ಎಂದು ಕಿವಿಮಾತು ನುಡಿದರು.

ಪದವಿ, ಪುರಸ್ಕಾರಕ್ಕೇ ನಿಮ್ಮ ಬದುಕು ಮುಗಿದಿಲ್ಲ, ಜೀವನದ ಪ್ರತಿಕ್ಷಣವೂ ಅಧ್ಯಯನಶೀಲರಾಗಿ ವೃತ್ತಿ ಕೌಶಲ್ಯ ಹೆಚ್ಚಿಸಿಕೊಂಡು ರೋಗಿಗಳಿಗೆ ಅದರ ಫಲ ಸಿಗುವಂತೆ ಮಾಡಿ, ಬೇರೆಯವರ ಆದಾಯ ಕಂಡು ಅಸೂಯೆ ಬೇಡ, ಬರುವ ಹಣ ಬಂದೇಬರುತ್ತದೆ, ಎಷ್ಟೇ ಉನ್ನತ ಸ್ಥಾನಕ್ಕೆ ಹೋದರೂ ತಂದೆತಾಯಿ, ತಾಯ್ನಾಡು, ಗುರುಗಳನ್ನು ಮರೆಯಬೇಡಿ, ತಾಯಿಗೆ ಮಿಗಿಲಾದ ತ್ಯಾಗಜೀವಿ ಪ್ರಪಂಚದಲ್ಲಿ ಮತ್ತೊಂದಿಲ್ಲ ಎಂದರು.

ಅರಸು ಸಂಸ್ಥೆ ಅಧ್ಯಕ್ಷ ಆರ್.ಎಲ್.ಜಾಲಪ್ಪ, ಉಪಕುಲಪತಿ ಡಾ.ಸಿ.ವಿ.ರಘುವೀರ್, ಕುಲಪತಿ ಡಾ.ಎಸ್.ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್, ಕುಲಸಚಿವ ಡಾ.ಎ.ವಿ.ಮೊಯಿದ್ದೀನ್ ಕುಟ್ಟಿ, ಸಂಸ್ಥೆ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಖಜಾಂಚಿ ಜೆ.ರಾಜೇಂದ್ರ ಹಾಜರಿದ್ದರು.

### ವೈದ್ಯರ ಮೇಲೆ ದಬಾವಣೆ ಬೇಡ

ಯುವ ವೈದ್ಯರಿಗೆ ನೀತಿಸಂಹಿತೆ ಬೋಧಿಸಿದ ಮಂಜುನಾಥ್ ಸಾರ್ವಜನಿಕರಿಗೂ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಮೇಲೆ ದಬಾವಣೆ ದೌರ್ಜನ್ಯಗಳು ಬೇಡ, ವೈದ್ಯರೇನೂ ದೇವರಲ್ಲ, ಚಿಕಿತ್ಸೆ ಕೊಡಬಹುದಷ್ಟೇ ಹೊರತು ಪ್ರಾಣ ಕೊಡುವ ಶಕ್ತಿ ಇಲ್ಲ ಎಂದು ಕಿವಿಮಾತು ಹೇಳಿದರು.

ಕರ್ತವ್ಯನಿರತ ವೈದ್ಯರು ಅಥವಾ ಸಿಬ್ಬಂದಿ ಮೇಲೆ ಹಲ್ಲೆ ಮಾಡುವುದು ಶಿಕ್ಷಾರ್ಹ ಅಪರಾಧ, ಯಾವುದೇ ವೈದ್ಯ ರೋಗಿಯನ್ನು ಉಳಿಸಲು ಹೆಣಗಾಡುತ್ತಾನೆಯೇ ಹೊರತು ನಿರ್ಲಕ್ಷ್ಯ ತೋರುವುದಿಲ್ಲ ಎಂದು ನುಡಿದರು.

ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಲು ವೈದ್ಯರು ಮುಂದಾಗುತ್ತಿಲ್ಲ ಎಂಬ ಆರೋಪ ಸರಿಯಲ್ಲ, ಹಳ್ಳಿಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯ ಮತ್ತು ರಕ್ಷಣೆ ಒದಗಿಸಿದರೆ ಗ್ರಾಮಾಂತರ ಪ್ರದೇಶದಲ್ಲಿ ಸೇವೆ ಸಲ್ಲಿಸುವಂತೆ ಮಾಡಬಹುದು ಎಂದು ಅಭಿಪ್ರಾಯಪಟ್ಟರು.

# ವೈದ್ಯರು ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು

## ದೇವರಾಜು ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಡಾ.ಸಿ.ಎನ್.ಮಂಜುನಾಥ್ ಸಲಹೆ

• **ಕನ್ನಡಪ್ರಭ ವಾರ್ತೆ** ಕೋಲಾರ

ಸೇವಾ ಮನೋಭಾವದಲ್ಲಿ ಆರೋಗ್ಯ ಸೇವೆ ಸಲ್ಲಿಸುವ ವೈದ್ಯರಿಗಿಂತ ಹಣಗಳಿಸುವ ವೈದ್ಯರ ಸಂಖ್ಯೆ ಹೆಚ್ಚಾಗಿರುವುದು ಸಮಾಜದ ದುರಂತ ಎಂದು ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ನಗರ ಹೊರವಲಯದ ದೇವರಾಜು ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಕೇಂದ್ರಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡದೆ ವೈದ್ಯರು ವಂಚಿಸುತ್ತಿದ್ದಾರೆ ಎಂದು ವಿಷಾದಿಸಿದರು.

ಮಾನಸಿಕ ಒತ್ತಡ ಕಾರಣ:

ಇತ್ತೀಚೆಗೆ ಮನುಷ್ಯನಲ್ಲಿ ಒತ್ತಡದ ಜೀವನ ಶೈಲಿಯಿಂದ ಹಾಗೂ ಕಾರ್ಯದ ಒತ್ತಡದಿಂದ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗುತ್ತಿವೆ. ಜಪಾನ್, ಅಮೆರಿಕ ದೇಶಗಳಲ್ಲಿ 55-60 ವರ್ಷ ಮೇಲ್ಪಟ್ಟವರಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಕಾಣಿಸಿಕೊಳ್ಳುತ್ತಿದೆ. ಆದರೆ ಭಾರತದಲ್ಲಿ 25 ರಿಂದ 30 ವರ್ಷದೊಳಗಿನವರಲ್ಲೇ ಹೃದಯ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ ಎಂದರು.

ಮಹಿಳೆಯರು ತಮ್ಮ ಪತಿ ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಾರೆಯೇ ಹೊರತು ತಮ್ಮ ಆರೋಗ್ಯವನ್ನು ನಿರ್ಲಕ್ಷ್ಯಿಸಿ ವೈದ್ಯರ ಬಳಿಗೆ ಹೋಗುವುದನ್ನು ನಿಧಾನ ಮಾಡುತ್ತಾರೆ. 35 ವರ್ಷ ದಾಟಿದ ಪುರುಷರು ಹಾಗೂ 45 ವರ್ಷ ದಾಟಿದ ಮಹಿಳೆಯರು ವರ್ಷಕ್ಕೊಮ್ಮೆ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಬೇಕಾದ ಅಗತ್ಯವಿದೆ



ಘಟಿಕೋತ್ಸವದಲ್ಲಿ ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ.ಮಂಜುನಾಥ್ ಮಾತನಾಡಿದರು.

ಎಂದು ಹೇಳಿದರು.

**ಚಿನ್ನದ ಪದಕ ಪ್ರದಾನ:** ಡಾ.ಆರ್.ಯಶಸ್ವಿನಿ, ಡಾ.ಆರ್.ನಿಖಿಲಾ, ಡಾ.ಕೆ.ದಿಲೀಪ್‌ಕುಮಾರ್, ಡಾ.ಟಿ.ಸಿ.ಸುಪ್ರಿಯಾ, ಡಾ.ಎಸ್.ಚೈತ್ರಾ, ಡಾ.ನವ್ಯಾಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಘಟಿಕೋತ್ಸವದಲ್ಲಿ ಒಟ್ಟು 271 ಮಂದಿ ವೈದ್ಯಕೀಯ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

ಸಂಸ್ಥೆಯ ಉಪ ಕುಲಪತಿ ಡಾ.ಸಿ.ವಿ.ರಘುವೀರ್ ವಾರ್ಷಿಕೋತ್ಸವ ವಾಚಿಸಿದರು. ಸಂಸ್ಥೆಯ ಅಧ್ಯಕ್ಷ ಆರ್.ಎಲ್.ಜಾಲಪ್ಪ, ಕುಲಪತಿ ಡಾ.ಎಸ್.ಕುಮಾರ್, ಕುಲ ಸಚಿವ ಡಾ.ವಿ.ಎಂ.ಕುಟ್ಟಿ, ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದರು.

ಕೋಲಾರ ಪತ್ರಿಕೆ



ಡಿ. ದೇವರಾಜ ಅರಸು ವೈದ್ಯಕೀಯ ವಿ.ವಿ.ಯಲ್ಲಿ ಏಳನೇ ಘಟಿಕೋತ್ಸವ ಸಂಭ್ರಮ

# ಆರೋಗ್ಯ ಸೇವೆಯಲ್ಲಿ ಹೆಚ್ಚಳವಾದರೂ ಗುಣಮಟ್ಟವಿಲ್ಲ: ಮಂಜುನಾಥ್ ಖೇದ









ಕೋಲಾರ ಮಾ ೨೪ [illegible] ದಶಕಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಈಚಿನ ದಿನಗಳಲ್ಲಿ ಆರೋಗ್ಯ ಸೇವೆಯ ಪ್ರಮಾಣ ಹೆಚ್ಚಾಗುತ್ತಿದ್ದರೂ ಗುಣಮಟ್ಟದಲ್ಲಿ ಮಾತ್ರ ಭಾರೀ ಕುಸಿತ ಕಂಡುಬರುತ್ತಿದೆಯೆಂದು ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ॥ ಸಿ.ಎನ್.ಮಂಜುನಾಥ್ ಖೇದ ಸೂಚಿಸಿದರು.

ನಗರದ ಹೊರವಲಯದ ಟಮಕದ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಏಳನೇ ಘಟಿಕೋತ್ಸವ ಕಾರ್ಯಕ್ರಮದ ಪ್ರಧಾನ ಭಾಷಣ ಮಾಡಿದ ಅವರು ರೋಗಿಯನ್ನು ಮಾನವೀಯ ದೃಷ್ಟಿಯಿಂದ ಕಂಡು ಆರೋಗ್ಯಸೇವೆ ನೀಡುವ ವೈದ್ಯರಿಗಿಂತಲೂ ಯಾವುದಾದರೂ ರೋಗಭೀತಿಯನ್ನು ಹರಡಿ ಹಣಗಳಿಸುವ ವೈದ್ಯರೇ ಅಧಿಕವಾಗುತ್ತಿದ್ದಾರೆ ಎಂದರು.

ಆಧುನಿಕ ಜಗದಲ್ಲಿ ಒತ್ತಡ ಜೀವನ ಮತ್ತು ಕೆಲಸದ ಒತ್ತಡಗಳಿಂದ ಹೃದಯ ಸಂಬಂಧಿ ವ್ಯಾಧಿಗಳು ಹೆಚ್ಚಾಗತೊಡಗಿವೆ. ವಿದೇಶಗಳಿಗಿಂತಲೂ ನಮ್ಮ ದೇಶದಲ್ಲಿ ಪ್ರೌಢಾವಸ್ಥೆಯಲ್ಲೇ ಹೃದಯ ಸಂಬಂಧಿ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ ಎಂದು ಮಂಜುನಾಥ್ ನುಡಿದರು.

ಜಯದೇವ ಆಸ್ಪತ್ರೆಯಲ್ಲಿ ಈಚೆಗೆ ನಡೆಸಿದ ಅಧ್ಯಯನದ ಪ್ರಕಾರ ೫ ಸಾವಿರ ಮಂದಿ ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವವರಲ್ಲಿ ಕಾಲುಭಾಗದಷ್ಟು ಮಂದಿ ೪೦ ವರ್ಷಕ್ಕಿಂತಲೂ ಚಿಕ್ಕವರು ಎನ್ನುವುದು ಆತಂಕ ತರುವ ಸಂಗತಿಯೆಂದು ಹೇಳಿದರು.

ಮನುಷ್ಯನ ಮುಖದಲ್ಲಿ ನಗು ವಿರಳವಾಗಿ ಒತ್ತಡವೇ ಹೆಚ್ಚಾಗುತ್ತಿದೆ. ನಿಯಮಿತವಾದ ಆಹಾರ ಸೇವನೆ, ವ್ಯಾಯಾಮ, ಸದಭಿರುಚಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಹೃದಯ ಸಂಬಂಧಿ ರೋಗಗಳಿಂದ ದೂರ ಇರಲು ಸಾಧ್ಯವೆಂದು ಅವರು ಸಲಹೆಯಿತ್ತರು.

ಜಾಗತಿಕ ಕಾಲಘಟ್ಟದಲ್ಲಿ ವೈದ್ಯಕೀಯ ಕ್ಷೇತ್ರ ಎದುರಿಸುತ್ತಿರುವ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ಯುವ ವೈದ್ಯರು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಲೇಷಿಯಾ ಮೂಲದ ಡಾ॥ ನವನ್ಯಾ ಸೇರಿ ಆರು ಮಂದಿಗೆ ಬಂಗಾರದ ಪದಕ ಮತ್ತು ೨೭೧ ಮಂದಿ ವೈದ್ಯಕೀಯ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

ಸಂಸ್ಥೆಯ ಅಧ್ಯಕ್ಷ ಆರ್.ಎಲ್.ಜಾಲಪ್ಪ, ಉಪ ಕುಲಪತಿ ಡಾ॥ ಸಿ.ವಿ.ರಘುವೀರ್, ಕುಲಪತಿ ಡಾ॥ ಎಸ್.ಕುಮಾರ್, ಕುಲ ಸಚಿವ ಡಾ॥ ವಿ.ಎಂ.ಕುಟ್ಟಿ, ಕಾರ್ಯದರ್ಶಿ ಜಿ.ಎಚ್. ನಾಗರಾಜ್, ಅರಸು ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ॥ ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ॥ ಡಿ.ವಿ.ಎಲ್.ಎನ್.ಪ್ರಸಾದ್ ಮತ್ತಿತರರು ಹಾಜರಿದ್ದರು.

## ದೇವರಾಜು ಅರಸು ವೈದ್ಯಕೀಯ ಕಾಲೇಜಿನಲ್ಲಿ 7ನೇ ಘಟಿಕೋತ್ಸವ

# ಆರೋಗ್ಯ ಸೇವೆ ಬದಲು ಹಣ ಗಳಿಸುವ ವೈದ್ಯರು ಹೆಚ್ಚಾಗುತ್ತಿರುವುದು ದುರಂತ: ಡಾ॥ ಮಂಜುನಾಥ್





ಕೋಲಾರ: ಆರೋಗ್ಯ ಸೇವೆ ನೀಡುವ ವೈದ್ಯರಿಗಿಂತ ಹಣಗಳಿಸುವ ವೈದ್ಯರೇ ಹೆಚ್ಚಾಗುತ್ತಿರುವುದು ದುರಂತದ ಸಂಗತಿ' ಎಂದು ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ನಗರ ಹೊರವಲಯದ ದೇವರಾಜು ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಕೇಂದ್ರಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡದೆ ವೈದ್ಯರು ವಂಚಿಸುತ್ತಿದ್ದಾರೆ ಎಂದು ವಿಷಾದಿಸಿದರು.

ಆಧುನಿಕ ಕಾಲಘಟ್ಟದಲ್ಲಿ ಮನುಷ್ಯನ ಒತ್ತಡದ ಜೀವನಶೈಲಿ ಹಾಗೂ ಕಾರ್ಯದ ಒತ್ತಡದಿಂದ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಜಪಾನ್, ಆಮೇರಿಕ ದೇಶಗಳಲ್ಲಿ 55–60 ವರ್ಷ ಮೇಲ್ಪಟ್ಟ ವರಲ್ಲಿ ಹೃದಯ ಸಂಬಂಧಿ ಕಾಯಿಲೆ ಗಳು ಕಾಣಿಸಿಕೊಳ್ಳುತ್ತಿದೆ. ಭಾರತದಲ್ಲಿ 25–30 ವರ್ಷದೊಳಗಿನ ವರಲ್ಲೆ ಹೃದಯ ಕಾಯಿಲೆಗಳಿಗೆ ಒಳಗಾಗು ತ್ತಿದ್ದಾರೆ ಎಂದರು.

ಇತ್ತೀಚಿಗೆ ಜಯದೇವ ಆಸ್ಪತ್ರೆಯಲ್ಲಿ ತಪಾಸಣೆ ನಡೆಸಿದಾಗ 5 ಸಾವಿರ ಮಂದಿ ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವವರು ಪತ್ತೆಯಾಗಿದ್ದಾರೆ. ಇವರಲ್ಲಿ ಶೇ.25 ಮಂದಿ 40 ವರ್ಷಕ್ಕಿಂತ ಕಡಿಮೆಯುವರು. 18 ವರ್ಷದೊಳಗಿನ ಯುವಕರು ಸಹ ಹೃದಯ ಸಂಬಂಧಿ ಕಾಯಿಲೆ ಪೀಡಿತರಾಗುತ್ತಿದ್ದಾರೆ. 2020ರ ವೇಳೆಗೆ ಹೃದಯ ಸಂಬಂಧಿ ರೋಗಿಗಳ ಪಟ್ಟಿಯಲ್ಲಿ ಭಾರತ ಅಗ್ರಸ್ಥಾನಕ್ಕೆ ಏರಲಿದೆ ಎಂದು ಕಳವಳಪಟ್ಟರು. 4ನೇ ಪುಟಕ್ಕೆ....

ಮೊದಲನೇ ಪುಟದಿಂದ.....

## ಹಣ ಗಳಿಸುವ ವೈದ್ಯರು ಹೆಚ್ಚಾಗುತ್ತಿರುವುದು ದುರಂತ

60 ವರ್ಷಗಳ ಹಿಂದೆ ಈ ಪರಿಸ್ಥಿತಿ ಇರಲಿಲ್ಲ. ಮನುಷ್ಯನ ಮೇಲಿನ ಒತ್ತಡ ಕಡಿಮೆ ಇತ್ತು. ಈಗ ಪ್ರತಿಯೊಬ್ಬರೂ ಒಂದೊಂದು ರೀತಿಯ ಒತ್ತಡ ಎದುರಿಸುತ್ತಿದ್ದಾರೆ. ಮನುಷ್ಯನ ಮುಖದಲ್ಲಿ ನಗು ವಿರಳವಾಗಿದೆ. ಸ್ತನ ಕ್ಯಾನ್ಸರ್ ಕೂಡಾ ಜೀವನಶೈಲಿಯಿಂದ ಬರುವ ಕಾಯಿಲೆಯಾಗಿದೆ ಎಂದು ಅವರು ಹೇಳಿದರು.

ಮಹಿಳೆಯರು ಈಗ ಪುರುಷರಿಗೆ ಸರಿಸಮವಾಗಿ ದುಡಿಯುತ್ತಿದ್ದಾರೆ. ಅವರು ಪತಿ ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಾರೆ. ಆದರೆ, ತಮ್ಮ ಆರೋಗ್ಯವನ್ನು ನಿರ್ಲಕ್ಷ್ಯಿಸಿ ವೈದ್ಯರ ಬಳಿಗೆ ಹೋಗುವುದನ್ನು ನಿಧಾನ ಮಾಡುತ್ತಾರೆ. 35 ವರ್ಷ ದಾಟಿದ ಪುರುಷರು ಹಾಗೂ 45 ವರ್ಷ ದಾಟಿದ ಮಹಿಳೆಯರು ವರ್ಷಕ್ಕೊಮ್ಮೆ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಹೇಳಿದರು.

ನಿಯಮಿತ ಆಹಾರ ಸೇವನೆ, ವ್ಯಾಯಾಮ, ಸದಭಿರುಚಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಹೃದಯ ಸಂಬಂಧಿ ಕಾಯಿಲೆಗಳಿಂದ ದೂರ ಇರಲು ಸಾಧ್ಯ. ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ಸರಿಯಲ್ಲ ಎಂದರು.

ದೇಶದಲ್ಲಿ ಅನೇಕ ಮಂದಿ ವೈದ್ಯರು ಸೇವೆ ಸಲ್ಲಿಸಿದ್ದಾರೆ. ಆದರೆ ಈಗಿನ ಪರಿಸ್ಥಿತಿಯೇ ಬೇರೆಯಾಗಿದೆ. ಜಾಗತೀಕ ಕಾಲಘಟ್ಟದಲ್ಲಿ ವೈದ್ಯಕೀಯ ಕ್ಷೇತ್ರದಲ್ಲೂ ಅನೇಕ ಸವಾಲುಗಳು ಇವೆ. ಅದನ್ನು ಎದುರಿಸುವ ಶಕ್ತಿಯನ್ನು ಯುವ ವೈದ್ಯರು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವೈದ್ಯರು ರೋಗಿಗಳೊಂದಿಗೆ ಆತ್ಮೀಯತೆಯಿಂದ ಬೆರೆಯಬೇಕು. ಐದು ನಿಮಿಷಗಳಷ್ಟು ಕಾಲ ರೋಗಿಗಳ ಸಮಸ್ಯೆಯನ್ನು ಆಲಿಸಬೇಕು. ಆಗ ರೋಗಿಗಳಲ್ಲಿ ಆತ್ಮವಿಶ್ವಾಸ ಮೂಡಿದಾಗ ಶೇ.50ರಷ್ಟು ಗುಣಮುಖರಾಗುತ್ತಾರೆ. ರೋಗಿಗಳನ್ನು ಪ್ರೀತಿ ವಿಶ್ವಾದಿಂದ ನೋಡಿಕೊಳ್ಳುವ ಮಾನೋಭಾವ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಡಾ.ಆರ್.ಯಶಸ್ವಿನಿ, ಡಾ.ಆರ್.ನಿಖಿಲಾ, ಡಾ.ಕೆ.ದಿಲೀಪ್‌ಕುಮಾರ್, ಡಾ.ಟಿ.ಸಿ.ಸುಪ್ರಿಯಾ, ಡಾ.ಎಸ್.ಚೈತ್ರಾ, ಡಾ.ನವನ್ಯಾಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಘಟಿಕೋತ್ಸವದಲ್ಲಿ ಒಟ್ಟು 271 ಮಂದಿ ವೈದ್ಯಕೀಯ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

ಸಂಸ್ಥೆಯ ಉಪ ಕುಲಪತಿ ಡಾ.ಸಿ.ವಿ.ರಘುವೀರ್ ವಾರ್ಷಿಕೋತ್ಸವ ವಾಚಿಸಿದರು. ಸಂಸ್ಥೆಯ ಅಧ್ಯಕ್ಷ ಆರ್.ಎಲ್.ಜಾಲಪ್ಪ, ಕುಲಪತಿ ಡಾ.ಎಸ್.ಕುಮಾರ್, ಕುಲ ಸಚಿವ ಡಾ.ವಿ.ಎಂ.ಕುಟ್ಟಿ, ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದರು.

ಅಂತರಗಂಗೆ



# ಕೋಲಾರ: ದೇವರಾಜು ಅರಸು ಕಾಲೇಜಿನ 7ನೇ ಘಟಿಕೋತ್ಸವ

## ಹಣಕ್ಕೆ ಒತ್ತು ನೀಡುವ ವೈದ್ಯರ ಇರೋದು ದುರಂತ: ಡಾ. ಸಿ.ಎನ್. ಮಂಜುನಾಥ್

ಕೋಲಾರ,ಮಾ.24– ಆರೋಗ್ಯ ಸೇವೆ ನೀಡುವ ವೈದ್ಯರಿಗಿಂತ ಹಣಗಳಿಸುವ ವೈದ್ಯರೇ ಹೆಚ್ಚಾಗುತ್ತಿರುವುದು ದುರಂತದ ಸಂಗತಿ ಎಂದು ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ನಗರ ಹೊರವಲಯದ ದೇವರಾಜು ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಕೇಂದ್ರಗಳ ಸಂಖ್ಯೆ ಹೆಚ್ಚಾಗುತ್ತಿದೆ ಆದರೆ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡದೆ ವೈದ್ಯರು ವಂಚಿಸುತ್ತಿದ್ದಾರೆ ಎಂದು ವಿಷಾದಿಸಿದರು.

ಆಧುನಿಕ ಕಾಲಘಟ್ಟದಲ್ಲಿ ಮನುಷ್ಯನ ಒತ್ತಡದ ಜೀವನಶೈಲಿ ಹಾಗೂ ಕಾರ್ಯದ ಒತ್ತಡದಿಂದ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಜಪಾನ್, ಅಮೆರಿಕ ದೇಶಗಳಲ್ಲಿ 55–60 ವರ್ಷ ಮೇಲ್ಪಟ್ಟವರಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಆದರೆ ಭಾರತದಲ್ಲಿ 25–30 ವರ್ಷದೊಳಗಿನವರಲ್ಲೇ ಹೃದಯ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ ಎಂದರು.

ಇತ್ತೀಚೆಗೆ ಜಯದೇವ ಆಸ್ಪತ್ರೆಯಲ್ಲಿ ತಪಾಸಣೆ ನಡೆಸಿದಾಗ 5 ಸಾವಿರ ಮಂದಿ ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವವರು ಪತ್ತೆಯಾಗಿದ್ದಾರೆ. ಇವರಲ್ಲಿ ಶೇ.25 ಮಂದಿ 40 ವರ್ಷಕ್ಕಿಂತ ಕಡಿಮೆಯವರು. 18 ವರ್ಷದೊಳಗಿನ ಯುವಕರು ಸಹ ಹೃದಯ ಸಂಬಂಧಿ ಕಾಯಿಲೆ ಪೀಡಿತರಾಗುತ್ತಿದ್ದಾರೆ. 2020ರ ವೇಳೆಗೆ ಹೃದಯ ಸಂಬಂಧಿ ರೋಗಿಗಳ ಪಟ್ಟಿಯಲ್ಲಿ ಭಾರತ ಅಗ್ರಸ್ಥಾನಕ್ಕೆ ಏರಲಿದೆ ಎಂದು ಕಳವಳಪಟ್ಟರು.



ಕೋಲಾರ.ಮಾ.24: ನಗರ ಹೊರವಲಯದ ದೇವರಾಜು ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಇಂದು ನಡೆದ ವೈದ್ಯಕೀಯ ಮಹಾವಿದ್ಯಾಲಯದ 7ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಡಾ.ಸೃಜನ್ ಅವರಿಗೆ ಪದವಿ ಪ್ರದಾನ ಮಾಡಲಾಯಿತು.

ಕೋಲಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಮುನಿರಾಜು ಮತ್ತು ವಿಟ್ಟಪ್ಪನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯೆ ಮಂಜುಳಾಮುನಿರಾಜು ರವರ ಸುಪುತ್ರನಾದ ಡಾ.ಸೃಜನ್ ರವರು ಪದವಿ ಪ್ರದಾನ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ದೇವರಾಜ ಅರಸು ವಿದ್ಯಾ ಸಂಸ್ಥೆಯ ಅಧ್ಯಕ್ಷ ಆರ್.ಎಲ್.ಜಾಲಪ್ಪ ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಉಪ ಕುಲಪತಿ ಡಾ.ಸಿ.ವಿ.ರಘುವೀರ್, ಕುಲಪತಿ ಡಾ.ಎಸ್.ಕುಮಾರ್, ಕುಲ ಸಚಿವ ಡಾ.ವಿ.ಎಂ.ಕುಟ್ಟಿ, ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್. ಪ್ರಸಾದ್ ಭಾಗವಹಿಸಿದ್ದರು.

60 ವರ್ಷಗಳ ಹಿಂದೆ ಈ ಪರಿಸ್ಥಿತಿ ಇರಲಿಲ್ಲ. ಮನುಷ್ಯನ ಮೇಲಿನ ಒತ್ತಡ ಕಡಿಮೆ ಇತ್ತು. ಈಗ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯ ಒತ್ತಡ ಎದುರಿಸುತ್ತಿದ್ದಾರೆ. ಮನುಷ್ಯನ ಮುಖದಲ್ಲಿ ನಗು ವಿರಳವಾಗಿದೆ. ಸ್ತನ ಕ್ಯಾನ್ಸರ್ ಕೂಡಾ ಜೀವನಶೈಲಿಯಿಂದ ಬರುವ ಕಾಯಿಲೆಯಾಗಿದೆ ಎಂದು ಅವರು ಹೇಳಿದರು.

ಮಹಿಳೆಯರು ಈಗ ಪುರುಷರಿಗೆ ಸರಿಸಮವಾಗಿ ದುಡಿಯುತ್ತಿದ್ದಾರೆ. ಅವರು ಪತಿ ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಾರೆ. ಆದರೆ, ತಮ್ಮ ಆರೋಗ್ಯವನ್ನು ನಿರ್ಲಕ್ಷ್ಯಿಸಿ ವೈದ್ಯರ ಬಳಿಗೆ ಹೋಗುವುದನ್ನು ವಿಳಂಬ ಮಾಡುತ್ತಾರೆ. 35 ವರ್ಷ ದಾಟಿದ ಪುರುಷರು ಹಾಗೂ 45 ವರ್ಷ ದಾಟಿದ ಮಹಿಳೆಯರು ವರ್ಷಕ್ಕೊಮ್ಮೆ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಹೇಳಿದರು.

ನಿಯಮಿತ ಆಹಾರ ಸೇವನೆ, ವ್ಯಾಯಾಮ, ಸದಭಿರುಚಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಹೃದಯ ಸಂಬಂಧಿ ಕಾಯಿಲೆಗಳಿಂದ ದೂರ ಇರಲು ಸಾಧ್ಯ. ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ಸರಿಯಲ್ಲ ಎಂದರು.

ದೇಶದಲ್ಲಿ ಅನೇಕ ಮಂದಿ ವೈದ್ಯರು ಸೇವೆ ಸಲ್ಲಿಸಿದ್ದಾರೆ. ಆದರೆ ಈಗಿನ ಪರಿಸ್ಥಿತಿಯೇ ಬೇರೆಯಾಗಿದೆ. ಜಾಗತೀಕ ಕಾಲಘಟ್ಟದಲ್ಲಿ ವೈದ್ಯಕೀಯ ಕ್ಷೇತ್ರದಲ್ಲೂ ಅನೇಕ ಸವಾಲುಗಳು ಇವೆ. ಅದನ್ನು ಎದುರಿಸುವ ಶಕ್ತಿಯನ್ನು ಯುವ ವೈದ್ಯರು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವೈದ್ಯರು ರೋಗಿಗಳೊಂದಿಗೆ ಆತ್ಮೀಯತೆಯಿಂದ ವರ್ತಿಸಬೇಕು. ಐದು ನಿಮಿಷಗಳಷ್ಟು ಕಾಲ ರೋಗಿಗಳ ಸಮಸ್ಯೆಯನ್ನು ಆಲಿಸಬೇಕು. ಆಗ ರೋಗಿಗಳಲ್ಲಿ ಆತ್ಮವಿಶ್ವಾಸ ಮೂಡಿ, ಶೇ.50ರಷ್ಟು ಗುಣಮುಖರಾಗುತ್ತಾರೆ. ರೋಗಿಗಳನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಡಾ.ಆರ್.[illegible], ಡಾ.ಆರ್.ನಿಖಿಲಾ, ಡಾ.ಕೆ.ದಿಲೀಪ್ ಕುಮಾರ್, ಡಾ.ಟಿ.ಸಿ.ಸುಬ್ರಮಣ್ಯ, ಡಾ.ಎಸ್.ಚೈತ್ರಾ, ಡಾ.[illegible]ಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಘಟಿಕೋತ್ಸವದಲ್ಲಿ ಒಟ್ಟು 271 ಮಂದಿ ವೈದ್ಯಕೀಯ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

ಸಂಸ್ಥೆಯ ಉಪ ಕುಲಪತಿ ಡಾ.ಸಿ.ವಿ.ರಘುವೀರ್ ವಾರ್ಷಿಕೋತ್ಸವ ವಾಚಿಸಿದರು. ಸಂಸ್ಥೆಯ ಅಧ್ಯಕ್ಷ ಆರ್.ಎಲ್.ಜಾಲಪ್ಪ, ಕುಲಪತಿ ಡಾ.ಎಸ್.ಕುಮಾರ್, ಕುಲ ಸಚಿವ ಡಾ.ವಿ.ಎಂ.ಕುಟ್ಟಿ, ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದರು.